
ಜನಮನ ಜನಪದ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪ | ನವೆಂಬರ್ ೨೦೦೩ | ಸಂಚಿಕೆ ೬



ಸ್ವಾತಂತ್ರ್ಯೋತ್ತರದ ನೆಹರು ಕಥೆ

- ಶಶಿ ಥರೂರ್

ಮತಾಂತರ: ಮರು ಚಿಂತನೆ ಅಗತ್ಯ

- ಸುರೇಂದ್ರ ಕೌಲಗಿ

ಅಪ್ರತಿಮ ಸಂಶೋಧಕ ಡಾ|| ಶಿವಬಸವ ಸ್ವಾಮಿಗಳು

- ಲೇ|| ಡಾ|| ಎಂ. ಚಿದಾನಂದಮೂರ್ತಿ

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪

ಸಂಚಿಕೆ ೫

ನವೆಂಬರ್ ೨೦೦೩

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ :

ವಾರ್ಷಿಕ	:	ರೂ. ೧೦೦/-
ಅರ್ಧ ವಾರ್ಷಿಕ	:	ರೂ. ೫೦/-
ಬಿಡಿ ಸಂಚಿಕೆ	:	ರೂ. ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ.)

ಕಲ್ಯಾಣಿ ಬೀದಿ

ಮೇಲುಕೋಟೆ

ಜಿಲ್ಲಾ ಮಂಡ್ಯ - ೫೭೧ ೪೩೧

ದೂರವಾಣಿ :

೦೮೨೩೬-೨೯೮೭೫೪

ಹೂ ಮಾರಿದ ಹುಡುಗಿ...

ಈಕೆ ಉಟ್ಟ ಸೀರೆ ಯಾವ ಕಾಲದ್ದೋ
ಇದರ ಮೈ ತುಂಬಾ ಹೊಲಿಗೆ, ಸೆರಗಂತೂ ಇಲ್ಲವೇ ಇಲ್ಲ

ಬಿರಿದ ತುಟಿಗಳು, ಬಿಸಿಲ ಅಪ್ಪುಗೆಗೆ
ಅಂಜಿ ಒಂದಕ್ಕೊಂದು ಅಪ್ಪಿಕೊಂಡೇ ಕುಳಿತಿದ್ದವು.

ಹೂ ಮಾರುವ ಹುಡುಗಿಯಾದರೂ, ಹೂ ಮುಡಿದಿಲ್ಲ;
ಬದುಕಿಗಾಸರೆ ಪಡೆಯಲು ಬಂದಾಕೆ

ಕನಕಾಂಬರ, ಮಲ್ಲಿಗೆ ತುಂಬಿದ ಹೂ ಬುಟ್ಟಿ
ಯಾರಾದರೂ ಕೊಂಡಾರೆಂಬ ಹಂಬಲದ ಕಣ್ಣೋಟ
ದಿಢೀರನೇ ತಣ್ಣಗೇ ಬೀಸಿದ ಗಾಳಿ ಅತ್ತಿತ್ತ ನೀರೊತ್ತ
ಮೋಡಗಳ ತೇಲಾಟ

ಮಳೆ ಬೀಳುವ ಅಂಜಿಕೆಗೆ ಅತ್ತಿತ್ತ ನಡೆದಾಡುವ
ಜನಗಳ ಪಯಣ ಮನೆಯತ್ತ
ನೀರೀಕ್ಷೆ ಹುಸಿಯಾಗಲಿಲ್ಲ, ಮಳೆ ಸುಯ್ಯೆಂದಿತು
ಒದ್ದೆಯಾದಳು ಹುಡುಗಿ ತೋಯ್ದು.

ಮನ, ಮೈಗಳು ಆಗರ್ಭ ಸಿರಿವಂತಿಕೆಯಂತೆ.
ಮನೆ ಮಾತ್ರ ಹಿಡಿ ಕಾಳಿಲ್ಲದ ಮಾಡದಂತೆ
ಆ ದಿನದ ಕಾಸು ಕೈಗೆ ದಕ್ಕಲಿಲ್ಲ
ನೀರಲ್ಲಿ ನೆಂದ ಅಂಗಾಂಗಗಳು ಮಿಣುಕಿದವು
ತರುಣರ ಬೆಂಗಾವಲು, ಕಣ್ಣನ್ನೆ ಹೆಚ್ಚಾದವು

ಹೂ ಖರ್ಚಾಗದೇ ಬಿಕೋ ಎಂದವು
ಹುಡುಗಿಗೆ ಅನ್ನ ನೀಡದೇ ಹತಾಶೆಗೊಂಡವು

ಬದುಕಬೇಕು, ಹೇಗಾದರೂ ಬದುಕ ನೂಕ ಬೇಕು
ಯೌವನವೊಂದಿದೆಯಲ್ಲ; ಕೊರತೆಯೇನು?

ಸೀರೆ ಮಣ್ಣ ಅಪ್ಪಿತು, ಹುಡುಗಿ ಮುಗಿಲ ನೋಡಿದಳು
ಅನಾಮಿಕ ಹಣವಿಟ್ಟು, ಹೊಸ ಬದುಕಿಗೆ ನಾಂದಿ ಹಾಡಿದ

ಶಿ.ಕಾ.ಬ.

ವಿಚಾರ ದೀಪ್ತಿ ....

ಪುಸ್ತಕಗಳನ್ನು ಏಕೆ ಓದಬೇಕು? ವಿಷಯ ತಿಳಿಯಲು, ಸಂತೋಷ ಪಡಲು, ಸ್ವಂತ ಮನಸ್ಸಿಗೆ ತರಬೇತಿ ಕೊಡಲು - ಖಂಡಿತವಾಗಿ ಇದೆಲ್ಲಕ್ಕಾಗಿ ಮತ್ತು ಇನ್ನೂ ಹೆಚ್ಚಿನ ಪ್ರಯೋಜನಕ್ಕಾಗಿ.

ಅಂತಿಮವಾಗಿ ಸಾವಿರಾರು ಮುಖಗಳುಳ್ಳ ಜೀವನವನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಜೀವನ ನಡೆಸುವುದಕ್ಕೆ

ನಮ್ಮ ವೈಯಕ್ತಿಕ ಅನುಭವಗಳು ಬಹಳ ಸಂಕುಚಿತ ಮತ್ತು ಸೀಮಿತ. ನಾವು ಇವುಗಳನ್ನು ನಂಬಿದರೆ ನಮ್ಮ ಬದುಕು ಕೂಡ ಸಂಕುಚಿತ ಮತ್ತು ಸೀಮಿತಗೊಳ್ಳುವುದು.

ಆದರೆ ಪುಸ್ತಕಗಳು ನಮಗೆ ಅಸಂಖ್ಯಾತ ಜನರ ಅನುಭವಗಳನ್ನೂ ವಿಚಾರಗಳನ್ನೂ ಅದರಲ್ಲಿಯೂ ಆಯಾ ತಲೆಮಾರಿನ ವಿದ್ವಾಂಸರ ಅನುಭವಗಳನ್ನೂ ಮತ್ತು ವಿಚಾರಗಳನ್ನೂ - ತಿಳಿಸುತ್ತವೆ ಮತ್ತು ನಮ್ಮನ್ನು ಸಂಕುಚಿತ ಕೊಚ್ಚೆಯಿಂದ ಮೇಲಕ್ಕೆತ್ತುತ್ತವೆ.

ಆದ್ದರಿಂದ ಜೀವನವನ್ನು ಸಮಗ್ರವಾಗಿ ಚಿತ್ರಿಸುವ ಮತ್ತು ಅದನ್ನು ಚೆನ್ನಾಗಿ ನಡೆಸಲು ಸಾಮರ್ಥ್ಯವಿರುವ ಇಂಥ ವಿಶಾಲ ದೃಷ್ಟಿಕೋನ ಬೆಳೆಸಿಕೊಳ್ಳುವುದು ನಮ್ಮೆಲ್ಲರಿಗೆ ಯೋಗ್ಯವಾದುದು.

- ಜವಹರಲಾಲ್ ನೆಹರು

ಅಪ್ರತಿಮ ಸಂಶೋಧಕ ಡಾ|| ಶಿವಬಸವ ಸ್ವಾಮಿಗಳು

- ಲೇ|| ಡಾ|| ಎಂ. ಚಿದಾನಂದಮೂರ್ತಿ

ಒಂದು ಮಠದ ಮುಖ್ಯಸ್ಥರಾಗಿದ್ದುಕೊಂಡು ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ಡಾ. ಶಿವಬಸವಸ್ವಾಮಿಗಳು ಸಾಮಾಜಿಕ ಚಿಂತಕರೂ, ಉನ್ನತ ಮಟ್ಟದ ಸಂಶೋಧಕರೂ ಹೌದು. ಪಾರ್ಕಿನ್ಸನ್ ತೊಂದರೆಯಿಂದ ದೇಹ ನರಳುತ್ತಿದ್ದರೂ ಅವರ ಅಂತರಂಗದ ಸಾಧನೆ, ಬಹಿರಂಗದ ಅಧ್ಯಯನಗಳು ಮುಕ್ಕಾಗಿಲ್ಲ.

ಕನ್ನಡದ ಶ್ರೇಷ್ಠ ಕವಿ, ಚಿಂತಕ ಡಾ. ಪು.ತಿ. ನರಸಿಂಹಾಚಾರ್ಯರು ೧೯೮೬ರಲ್ಲಿ ಸಾಯಣ ಮಾಧವರ ಸಂಸ್ಕೃತ ಉದ್ಘಕೃತಿ 'ಸರ್ವದರ್ಶನ ಸಂಗ್ರಹ'ದ ಕನ್ನಡ ಅನುವಾದದ ಬಗ್ಗೆ ಹೀಗೆ ಹೇಳಿದ್ದಾರೆ. 'ಶ್ರೀ ವಿದ್ವಾನ್ ಇಮ್ಮಡಿ ಶಿವಬಸವ ಸ್ವಾಮಿಗಳವರು ಭಾಷಾಂತರಿಸಿರುವ ಸರ್ವದರ್ಶನ ಸಂಗ್ರಹವೆಂಬ ಉದ್ಘಕೃತಿಯನ್ನು ಓದುತ್ತಾ ಓದುತ್ತಾ ನಾನು ತುಂಬ ಸಂತೋಷಪಟ್ಟೆ. ಈ ಶಾಸ್ತ್ರದ ರಸಾಯನಂದವನ್ನು ನಾನು ಕಂಡ ಕಂಡ ಮಿತ್ರರಿಗೆ ತಿಳಿಸುತ್ತಾ ಭಾಷಾಂತರವೆಂದರೆ ಹೀಗಿರಬೇಕು ಎಂದು ಹೇಳುತ್ತಿದ್ದೇನೆ. ಸಂಸ್ಕೃತದಿಂದ ದಾರ್ಶನಿಕ ಶಾಸ್ತ್ರಗಳು ಕನ್ನಡಕ್ಕೆ ಬಂದ ಹೊರತು ನಮ್ಮ ವಿಚಾರ ಶಕ್ತಿ ಕುದುರದು, ಬಾಷೆಯ ಹುರುಳೂ ಹೆಚ್ಚದು, ಸ್ವಂತಿಕೆಯನ್ನು ಪಡೆಯದು', ಸಂಸ್ಕೃತ, ಕನ್ನಡ, ಇಂಗ್ಲಿಷ್ ಬಾಷೆಗಳಲ್ಲಿ ಏಕ ಪ್ರಕಾರವಾದ ವಿದ್ವತ್ತನ್ನೂ, ಶಿಸ್ತು ಬದ್ಧ ಸಂಶೋಧನಾ ದೃಷ್ಟಿಯನ್ನೂ ಅಂತೆಯೇ ನಿರ್ಮಿತಾಕಾರವಾಗಿ ಪರಿಶೀಲಿಸುವ ಸಮತೋಲನ ಪ್ರವೃತ್ತಿಯನ್ನೂ ಬೆಳೆಸಿಕೊಂಡಿರುವ ವಿದ್ವಾನ್ ಇಮ್ಮಡಿ ಶಿವಬಸವ ಸ್ವಾಮಿಗಳ ಕೃತಿಯ ಬಗ್ಗೆ ಡಾ. ಪು.ತಿ.ನ ಆಡಿರುವ ಮಾತುಗಳು ಆತ್ಮೀಯವಾಗಿವೆ. ವಸ್ತುನಿಷ್ಠವಾಗಿವೆ.

ಅರವತ್ನಾಲ್ಕರ ವಯೋಮಾನದ ಪೂಜ್ಯ ಶ್ರೀ ಶಿವಬಸವ ಸ್ವಾಮಿಗಳು ಈಗ ಮೈಸೂರಿನಲ್ಲಿ ಅರಮನೆ ಸಮೀಪದಲ್ಲೇ ಇರುವ ಕುಂದೂರು ಮಠಾಧ್ಯಕ್ಷರಾಗಿದ್ದಾರೆ. ೧೯೩೯ರಲ್ಲಿ ಚಾಮರಾಜನಗರ ತಾಲ್ಲೂಕು ಬಸವನಪುರ ಗ್ರಾದಮಲ್ಲಿ ಜನಿಸಿದ ಅವರು ವೇದಾಂತ ವಿದ್ವತ್, ಅಲಂಕಾರ ವಿದ್ವತ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆ, ಪ್ರಥಮ ರ್‍ಯಾಂಕ್ ಸಂಪಾದಿಸಿ ಮೈಸೂರು ವಿಶ್ವ ವಿದ್ಯಾನಿಲಯದಿಂದ ಪ್ರಥಮ ದರ್ಜೆಯಲ್ಲಿ ಎಂ.ಎ. ಪದವಿಯನ್ನು (೧೯೬೮). ೧೯೯೧ರಲ್ಲಿ ಅದೇ ವಿಶ್ವವಿದ್ಯಾನಿಲಯದಿಂದ 'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ' ನಿಬಂಧಕ್ಕೆ ಪಿಎಚ್.ಡಿ. ಪದವಿಯನ್ನೂ ಪಡೆದರು.

ಆಗಲೇ ಸೂಚಿಸಿದಂತೆ ಶಿವಬಸವ ಸ್ವಾಮಿಗಳವರ ಸಂಸ್ಕೃತ ಪಾಂಡಿತ್ಯವು ತಲಸ್ಪರ್ಶಿಯಾದುದು. ಗುರುತಲದಲ್ಲಿ ಕುಳಿತು ಸಂಸ್ಕೃತವನ್ನು ಕಲಿತು ಆ ಬಾಷಾವಾಙ್ಮಯವನ್ನು

ನಮ್ಮ ಜಾಣತನ ನಮ್ಮ ಅನುಭವದಿಂದ ಬರುತ್ತದೆ. ಅನುಭವ ನಮ್ಮ ಮೂರ್ಖತನದಿಂದ

ಅವರ ಹೆಸರಿನ ಹಿಂದಿನ 'ವಿದ್ವಾನ್' ಪ್ರಶಸ್ತಿಯು ಅದರ ಸಂಕೇತ; ಅಂತೆಯೇ ಅವರು ಆಧುನಿಕ ಕಠಿಣ ಸಂಶೋಧನಾ ಶಿಸ್ತಿಗೂ ತಮ್ಮನ್ನು ಒಳಪಡಿಸಿಕೊಂಡಿದ್ದಾರೆ. ಅವರ ಹೆಸರಿನ ಹಿಂದಿನ 'ಡಾಕ್ಟರ್' ವಿಶೇಷಣವು ಅದರ ಸಂಕೇತ. ಈ ರೀತಿ ಸಾಂಪ್ರದಾಯಕ ಪಾಂಡಿತ್ಯ, ಆಧುನಿಕ ಸಂಶೋಧನಾ ಮನೋಧರ್ಮ ಇವೆರಡೂ ಪೂಜ್ಯರಲ್ಲಿ ಮೇಳವಿಸಿರುವುದು ಒಂದು ವಿರಳ ನಿದರ್ಶನವೆಂದೇ ಹೇಳಬೇಕು. ತಮ್ಮ ಬರಹಗಳಲ್ಲಿ ಅವರು ಬಳಸುವ ಭಾಷೆ, ನೋಡುವ ದೃಷ್ಟಿಕೋನ, ವಿಶ್ಲೇಷಣೆಯ ರೀತಿ, ಕೊನೆಗೆ ಅಡಿ ಟಿಪ್ಪಣಿಗಳನ್ನು ಕೊಡುವ ರೀತಿ ಇವು ಇಂಡಾಲಜಿ ಅಧ್ಯಯನಕ್ಕೆ ತಮ್ಮನ್ನು ತಾವು ಒಪ್ಪಿಸಿಕೊಂಡಿರುವ ಶ್ರೇಷ್ಠ ವಿಧ್ವಾಂಸರು ಅನುಸರಿಸುತ್ತಿದ್ದ ಮಾರ್ಗವೇ ಆಗಿದೆ. ಸಂಸ್ಕೃತದ ಬೇರೆ ಬೇರೆ ಕ್ಷೇತ್ರಗಳಲ್ಲಿ ನಡೆದಿರುವ ಕೆಲಸಗಳನ್ನೊಳಗೊಂಡಿರುವ ಇಂಗ್ಲಿಷ್ ಗ್ರಂಥಗಳೆಲ್ಲ ಅವರು ಓದಿ, ತಮ್ಮ ಸಂಪ್ರಬಂಧದಲ್ಲೋ ಕೃತಿಯಲ್ಲೋ ಅವುಗಳನ್ನು ಸಪ್ರಮಾಣವಾಗಿ ಉದಾಹರಿಸುತ್ತಾರೆ. ಆಧುನಿಕ ಪೂರ್ವ ಕನ್ನಡ ಸಾಹಿತ್ಯವನ್ನೂ ಅಷ್ಟೇ ಆಳವಾಗಿ ಅಭ್ಯಸಿದ್ದಾರೆ ಮತ್ತು ಕನ್ನಡದ ಪ್ರಾಚೀನ, ಆಧುನಿಕ ಕೃತಿಗಳಲ್ಲಿ ಕಂಡು ಬರುವ ಉಲ್ಲೇಖಾರ್ಹ ಭಾಗಗಳನ್ನು ಸೂಕ್ತ ಕಂಡಲ್ಲಿ ಬಳಸಿಕೊಳ್ಳುತ್ತಾರೆ. ಅವರ ಹಳತು ಹೊಸತರ ಹದವಾದ ಸಮನ್ವಯವು ಆದರ್ಶಮಯವಾಗಿದೆ. ಅವರು ಇಂದಿನ ಸಂಸ್ಕೃತ ಭಾಷಾ ಕ್ಷೇತ್ರದ ಉನ್ನತ ಮಟ್ಟದ ಸಂಶೋಧಕರಾಗಿದ್ದಾರೆ.

ಇಲ್ಲಿಯವರೆಗೆ ಶ್ರೀ ಶಿವಬಸವ ಸ್ವಾಮಿಗಳು ಅಕ್ಷರಶಃ ನೂರಾರು ಜನಪ್ರಿಯ ಲೇಖನಗಳನ್ನು, ಸಂಪ್ರಬಂಧಗಳನ್ನು (ಸಂಶೋಧನ ಲೇಖನಗಳನ್ನು) ಬೇರೆ ಬೇರೆ ಕೃತಿಗಳಲ್ಲಿ ಪ್ರಕಟಿಸಿದ್ದಾರೆ; ಹಲವು ಕೃತಿಗಳಿಗೆ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಅವರ ಬರಹಗಳು ಮುಖ್ಯವಾಗಿ ವೀರಶೈವ ಸಾಹಿತ್ಯ, ಶಾಸ್ತ್ರ ಸಂಬಂಧಿಯಾದುವಾದರೂ ವೇದಗಳು, ದರ್ಶನಗಳು, ಸಂಸ್ಕೃತ ಕಾವ್ಯಗಳ ಬಗ್ಗೆಯೂ ಅವರು ಸಾಕಷ್ಟು ಬರೆದಿದ್ದಾರೆ. ಕನ್ನಡ ವಚನ ಸಾಹಿತ್ಯದ ಮೇಲೆ ಹೊಸ ಬೆಳಕು ಚೆಲ್ಲುವಂತಹ ಹಲವು ಬರಹಗಳು ಅವರ ಲೆಖನಿಯಿಂದ ಮೂಡಿಬಂದಿವೆ. ಈಚಿನ ಕೆಲವು ವಿದ್ವಾಂಸರು, ಮಠಾಧೀಶರೂ ಸೇರಿದಂತೆ ಎಲ್ಲ ವಚನಕಾರರೂ ಸಂಸ್ಕೃತ ದ್ವೇಷಿಗಳು, ಅವರು ತಮ್ಮ ಬರಹಗಳಿಂದ ಸಂಸ್ಕೃತವನ್ನು ದೂರವಿಟ್ಟರು ಎಂಬರ್ಥ ಬರುವಂತೆ ಮಾತನಾಡುತ್ತಾರೆ. ಹಾಗೆಂದು ಬರೆದೂ ಇದ್ದಾರೆ, ವಚನಗಳ ಮಧ್ಯೆ ಬರುವ ಸಂಸ್ಕೃತ ಉಲ್ಲೇಖಗಳು, ಶ್ಲೋಕಗಳು ಅವರ ಪ್ರಕಾರ 'ಪ್ರಕ್ಷಿಪ್ತಗಳು'. ಆದರೆ ಡಾ. ಶಿವಬಸವ ಸ್ವಾಮಿಗಳು ಬೆಂಗಳೂರಿನಿಂದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ 'ಮಹಾಮನೆ' ಪತ್ರಿಕೆಯ ಹಲವು ಸಂಚಿಕೆಗಳಲ್ಲಿ ಆ ಸಂಸ್ಕೃತ ಉಕ್ತಿಗಳಿಗೆ, ಶ್ಲೋಕಗಳಿಗೆ ಮೂಲವಾದ ವೇದ, ಉಪನಿಷತ್ತು, ಆಗಮ, ಪುರಾಣ, ಸ್ಮೃತಿಗಳನ್ನು ಹುಡುಕಿ ಆ ಎಲ್ಲ ಆಕರಗಳನ್ನು ಪಟ್ಟಿ ಮಾಡಿಕೊಡುತ್ತಿದ್ದಾರೆ. ಸಂಶೋಧಕರಿಗೆ ಒಂದು ಹೊಸ ದಿಕ್ಕನ್ನು ಸೂಚಿಸಿದ್ದಾರೆ. ಅಷ್ಟೇ ಅಲ್ಲ, ವೀರಶೈವವು ಹಿಂದೂ ಧರ್ಮದ ಭಾಗವಲ್ಲವೆಂಬ ಜೊಳ್ಳುವಾದಕ್ಕೆ ಅವರ ಆ ಪಟ್ಟಿ ಒಂದು ಸಮರ್ಥ ಉತ್ತರವೆ ಆಗಿದೆ. ಸಂಸ್ಕೃತದ ಬಗೆಗಿನ ತಮ್ಮ ಜ್ಞಾನವನ್ನು ವಚನಕಾರರ ಮೇಲೆ

ಹೊರಿಸುವ ಪ್ರವೃತ್ತಿಯ ಹಿಂದಿನ ಮನೋವಿಜ್ಞಾನ ಸ್ಪಷ್ಟವಾಗಿದೆ.

ಅವರು ಸಂಪಾದಿಸಿರುವ ಚನ್ನಬಸವಣ್ಣನವರ 'ಕರಣ ಹಸಿಗೆ'ಯು ಬರೀ ವೀರಶೈವರಿಗೆ ಮಾತ್ರವಲ್ಲ, ಎಲ್ಲ ಭಾರತೀಯಿರಿಗೂ ಉಪಯುಕ್ತವಾದ ಕೃತಿ. ವೇದ, ಉಪನಿಷತ್ತು, ಆಗಮ, ಇತರ ಶಾಸ್ತ್ರಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿರುವ ಚನ್ನಬಸವಣ್ಣ ಆ ಕೃತಿಯಲ್ಲಿ ಇಂದ್ರಿಯಗಳ ಮೂಲಕ ನಾವು ಗ್ರಹಿಸುವ ಬಾಹ್ಯ ಜಗತ್ತಿನ ಎಂದರೆ 'ಬ್ರಹ್ಮಾಂಡ'ದ ವಿಶ್ಲೇಷಣೆಯನ್ನೂ ಮನಸ್ಸಿನ ಮೂಲಕ ಗ್ರಹಿಸುವ ಒಳ ಚೈತನ್ಯ ಶಕ್ತಿ'ಪಿಂಡಾಂಡ'ದ ವಿಶ್ಲೇಷಣೆಯನ್ನೂ ಮಾಡಿದ್ದಾರೆ. 'ಕರಣ' ಎಂದರೆ ತತ್ವ, 'ಹಸಿಗೆ' ಎಂದರೆ ವಿಶ್ಲೇಷಣೆ; ಹೊರ, ಒಳ ಜಗತ್ತುಗಳನ್ನು ನಾವು ಅರ್ಥ ಮಾಡಿಕೊಳ್ಳಲು ಯತ್ನಿಸುವುದೇ 'ಕರಣ ಹಸಿಗೆ' ಈ ಕೃತಿ ಮುಖ್ಯವಾಗಿ ಎಲ್ಲ ಮತಗಳ ಆಧ್ಯಾತ್ಮಿಕ ಸಾಧಕರಿಗೆ ಒಂದು ಕೈಪಿಡಿಯಿದ್ದಂತೆ. ಈ ಕೃತಿಗಿರುವ ಪ್ರಾಚೀನ ವ್ಯಾಖ್ಯಾನವನ್ನು ನೀಡಿ, ಬೆಲೆ ಬಾಳುವ ಮುನ್ನುಡಿಯನ್ನೂ ಸ್ವಾಮಿಗಳು ಬರೆದಿದ್ದಾರೆ.

'ಅಲ್ಲಮ ಪ್ರಭುವಿನ ಟೀಕಿನ ವಚನಗಳು' ಎಂಬ ಕೃತಿಯನ್ನೂ ಅವರು ಸಂಪಾದಿಸಿ ನೀಡಿದ್ದಾರೆ. ಅಲ್ಲಮನ ವಚನಗಳಿಗೆ ಕ್ರಿ.ಶ. ೧೪೨೦ರಲ್ಲಿ ಟೀಕು ಬರೆದಿರುವ ಮಹಾಲಿಂಗ ದೇವನ ಗುರು ಪರಂಪರೆಯು ಹನ್ನೆರಡನೆಯ ಶತಮಾನದ ದಲಿತ ವರ್ಗದ ವಚನಕಾರ ಉಲಿಲಿಂಗ ಪೆದ್ದಿಗೆ ಸೇರಿದ್ದು ಎಂಬುದು ವಿಸ್ಮಯದ ಸಂಗತಿ. ಶಿವಬಸವ ಸ್ವಾಮಿಗಳು ಮಹಾಲಿಂಗ ದೇವನ ವ್ಯಾಖ್ಯಾನ ಸಮೇತ ಅಲ್ಲಮನ ವಚನಗಳನ್ನು ಪ್ರಕಟಿಸಿ ಮತ್ತೆ ಮೌಲಿಕವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಕರಣ ಹಸಿಗೆಯಾಗಲಿ, ಟೀಕಿನ ವಚನಗಳಾಗಲಿ ಅವರಿಗಿಂತ ಮುಂಚೆಯೇ ಪ್ರಕಟಗೊಂಡ ಕೃತಿಗಳಾಗಿದ್ದರೂ ಅವುಗಳ ಆರಂಭದಲ್ಲಿ ಬರೆದಿರುವ ಪ್ರಸ್ತಾವನೆಗಳು ಬೆಲೆಯುಳ್ಳವಾಗಿವೆ. ವಿಶೇಷವಾಗಿ ಯೋಗಶಾಸ್ತ್ರದ ಬಹು ವಿಶ್ಲೇಷಣಾತ್ಮಕವಾದ ವಿವರಣೆಯನ್ನು ಸ್ವಾಮಿಗಳು ನೀಡಿರುವುದು ಶಿವಯೋಗಿ ಅಲ್ಲಮ ಪ್ರಭುಗಳನ್ನು ಅರ್ಥಯಿಸಿಕೊಳ್ಳಲು ಸಹಾಯಕವಾಗಿದೆ. ಅವರು ತಮ್ಮ ಪ್ರಸ್ತಾವನೆಯನ್ನು ನೀಡಿರುವ 'ದೇಹೋ ದೇವಾಲಯೋ ಪ್ರೋಕ್ತೋ ಜೀವೋ ದೇವಃ ಸದಾಶಿವ...' (ದೇಹವೇ ದೇವಾಲಯ, ಒಳಗಿನ ಜೀವವೇ ದೇವ) ಎಂಬ ಮೈತ್ರೀ ಉಪನಿಷತ್ತಿನ ಶ್ಲೋಕದ ಪ್ರಭಾವವು 'ಎನ್ನ ಕಾಲೇಕಂಬ, ದೇಹವೇ ದೇಗುಲ' ಎಂಬ ಬಸವಣ್ಣನವರ ವಚನದಲ್ಲಿ ಕಾಣುತ್ತದೆ. ಹಲವರು, ವಚನಕಾರರಲ್ಲಿ ಬಂದಿರುವ ಆಲೋಚನೆಗಳೆಲ್ಲ ಅವರಿಂದಲೇ ಜನ್ಯಗೊಂಡವು ಎಂಬ ಭಾವನೆಯಲ್ಲಿದ್ದಾರೆ. ವಚನಕಾರರ ಉದಾತ್ತ ಪ್ರಗತಿಪರ ಚಿಂತನೆಗಳಲ್ಲಿ ಹಲವು ಆಗಲೇ ಕಾಣಿಸಿಕೊಂಡಿದ್ದವು: ಅವುಗಳನ್ನು ಅವರು ಬದುಕಿಗೆ ಇಳಿಸಲು ಪ್ರಯತ್ನಿಸಿದ್ದು ಅವರ ಮಹತ್ಸಾಧನೆ; ಮೌಲ್ಯಗಳನ್ನು ಸಮಾಜೀಕರಣಗೊಳಿಸಿದ್ದು ಇನ್ನೂ ದೊಡ್ಡ ಸಾಧನೆ.

ಸ್ವಾಮಿಗಳವರ ಉತ್ಕೃಷ್ಟ ಕೃತಿ 'ಸರ್ವದರ್ಶನ ಸಂಗ್ರಹ'ದ ಕನ್ನಡ ಅನುವಾದದ ಬಗ್ಗೆ ಡಾ. ಪು.ತಿ.ನ.ರವರು ವ್ಯಕ್ತಪಡಿಸಿದ ಮೆಚ್ಚುಗೆಯನ್ನಾಗಲೇ ನೋಡಿದ್ದೇವೆ. ಸಾಯಣ ಮಾಧವರು ಹದಿನಾಲ್ಕನೇ ಶತಮಾನದ ಉತ್ತರಾರ್ಧದಲ್ಲಿ ಬರೆದ 'ಸರ್ವದರ್ಶನ ಸಂಗ್ರಹ'ಕ್ಕೆ ಸರಿಸಮಾನಾದ ಕೃತಿ ಈ ಕ್ಷೇತ್ರದಲ್ಲಿ ಇಡೀ ಭಾರತದಲ್ಲಿ ಮತ್ತೊಂದು ಇಲ್ಲ. ಪರಕೀಯ ಧರ್ಮವೊಂದರ

ಆಘಾತದಿಂದ ತತ್ತರಿಸಿ ಹೋಗಿದ್ದ ಭಾರತೀಯ ಸಂಸ್ಕೃತಿಯ ಸಂರಕ್ಷಣೆ, ಸಂವರ್ಧನೆಗಾಗಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯದ ಆರಂಭದ ವರ್ಷಗಳಲ್ಲಿ ಆ ಸಂಸ್ಕೃತಿಯ ತಾಯಿ ಬೇರುಗಳಂತಿರುವ ಕೃತಿಗಳ ಸಂಗ್ರಹ, ಪರಿಷ್ಕರಣ, ವ್ಯಾಖ್ಯಾನಗಳು ನಡೆದುದಲ್ಲದೆ ಆ ಸಂಸ್ಕೃತಿಯನ್ನು, ಅದರ ಚಿಂತನೆಗಳನ್ನು ಸಂಗ್ರಹ ರೂಪದಲ್ಲಿ ತಿಳಿಸುವ ಕೃತಿಗಳೂ ಹೊರಬರುವುದು ಅಂದಿನ ಯುಗದ ಅಗತ್ಯವೂ ಆಗಿತ್ತು. ಸಾಯಣ ಮಾಧವನು ಮೇಲೆ ಹೇಳಿದ ಕೃತಿಯಲ್ಲಿ ಚಾರ್ವಾಕ, ಬೌದ್ಧ, ಅರ್ಹತ, ರಾಮಾನುಜ, ಪೂರ್ಣಪ್ರಜ್ಞ, ಶೈವ, ಪ್ರತ್ಯಭಿಜ್ಞಾ, ಸಾಂಖ್ಯ, ಶಂಕರ ಇತ್ಯಾದಿ ಹದಿನಾರು ದರ್ಶನಗಳ ಸಾರಾಂಶವನ್ನು ನೀಡಿದ್ದಾನೆ. ಭಾರತೀಯ ಚಿಂತನಕಾರರ ಪ್ರಮುಖ 'ದರ್ಶನ'ಗಳನ್ನು ವ್ಯಸ್ಥಿತ ಸಂಗ್ರಹ ರೂಪದಲ್ಲಿ ಕೃತಿಕಾರನು ಇಲ್ಲಿ ನೀಡಿದ್ದಾನೆ. ಭಿನ್ನ ಭಿನ್ನ ದರ್ಶನಗಳನ್ನು, ಸಾಯಣ ಮಾಧವ ಸ್ವತಃ ತಾನು ಅದ್ವೈತ ಪಂಥಕ್ಕೆ ಸೇರಿದವನಾಗಿದ್ದರೂ ಶಾಸ್ತ್ರಿಯವಾಗಿ ಅರ್ಥ ಮಾಡಿಕೊಂಡು, ಅವುಗಳ ವಿಶ್ವಾಸಾರ್ಹ ಸಾರಾಂಶವನ್ನು ಇಲ್ಲಿ ನೀಡಿರುವುದು ಬಹು ಮುಖ್ಯ ಸಂಗತಿ. ನಕುಲೀಶ ಪಾತು ಪತದಂತಹ ಮತಪಂಥಗಳನ್ನರಿಯಲು ಈ ಕೃತಿಯೇ ಇಂದಿಗೂ ಮೂಲಾಧಾರ.

ಈ ಅತ್ಯಮೂಲ್ಯ ಸಂಸ್ಕೃತ ಕೃತಿಯ ಅನುವಾದವನ್ನು ಶ್ರೀ ಸ್ವಾಮಿಗಳು ಕನ್ನಡದಲ್ಲಿ ಸಂಸ್ಕೃತ ಶಾಸ್ತ್ರ ವಾಙ್ಮಯದ ಭಾಷೆಯ ಅಡಕು ಗುಣವನ್ನು ಉಳಿಸಿಕೊಂಡು ಕೊಟ್ಟಿರುವುದು ಶಾಸ್ತ್ರ ಗ್ರಂಥವನ್ನು ಕನ್ನಡಕ್ಕೆ ತರುವವರಿಗೆ ಒಂದು ಶ್ರೇಷ್ಠ ಮಾದರಿಯನ್ನು ಒದಗಿಸಿದಂತಾಗಿದೆ.

ಮತ್ತೆ ಅಷ್ಟೇ ಅಮೂಲ್ಯ ಈ ಕ್ಲಾಸಿಕ್ ಕೃತಿಗೆ ಅವರು ಬರೆದಿರುವ ಉಪೋದ್ಘಾತ, ಸಂಸ್ಕೃತ ಭಾಷೆಗೆ ಗಹನವಾದ, ಅತ್ಯಂತ ಕಡಿಮೆ ಶಬ್ದಗಳಲ್ಲಿ ವ್ಯಕ್ತಪಡಿಸಬಹುದಾದ ಮಹೋನ್ನತ ಶಕ್ತಿಯಿದೆ ಯೆಂಬ ಅವರ ಮಾತು ಒಂದು ವಾಸ್ತವ ಸತ್ಯ. ಬೇರೆ ಬೇರೆ ದರ್ಶನಗಳ ತೌಲನಿಕ ಸಮೀಕ್ಷೆಯ ಎಲ್ಲ ದರ್ಶನಗಳ ಸಾರ, ಜೀವ ಜಗತ್ತು ಪರಮಾತ್ಮ ಇವುಗಳ ಪರಸ್ಪರ ಸಂಬಂಧ, ಸುಖ, ದುಃಖ, ಮೋಕ್ಷ ಇವುಗಳ ಪರಿಕಲ್ಪನೆ ಈ ಎಲ್ಲದರ ಪರಿಚಯ ಮಾಡಿಕೊಡುತ್ತದೆ.

ಅವರ ಪಿಎಚ್.ಡಿ. ನಿಬಂಧ **'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ'** ಅವರ ಪಾಂಡಿತ್ಯ, ವಿವೇಚನಗಳ ಪಕ್ವಫಲ. ಈ ಕೃತಿ ವಿದ್ವಾಂಸರಿಗೆ ಮಾತ್ರವಲ್ಲ, ಭಾರತೀಯ ಸಾಹಿತ್ಯಕ್ಕೆ ಸಂಸ್ಕೃತದ ಮೂಲಕ ಕರ್ನಾಟಕದ ಕೊಡುಗೆ ಏನು ಎಂಬುದನ್ನು ತಿಳಿಯುವ ಎಲ್ಲ ಆಸಕ್ತರಿಗೂ ಪ್ರಿಯವಾಗ ಬೇಕಾದ ಗ್ರಂಥ. ಅಪಾರ ಶ್ರಮದಿಂದ ಸಿದ್ಧವಾಗಿರುವ ಇದು ಪಿಎಚ್.ಡಿ. ನಿಬಂಧದ ಒಂದು ಒಳ್ಳೆಯ ಮಾದರಿಯಾಗಬಹುದಾದ ಕೃತಿಯೂ ಆಗಿದೆ. ಇದರಲ್ಲಿ ಸಂಸ್ಕೃತ ಕಾವ್ಯಗಳನ್ನು ಮಾತ್ರವೇ ಅಲ್ಲದೆ ಕರ್ನಾಟಕದ ಕಾವ್ಯಮಯ ಶಾಸನಗಳನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಲಾಗಿದೆ. ಬಾಣಭಟ್ಟ, ಸಂಸ್ಕೃತ ಗದ್ಯ ಕಾವ್ಯ ಇತಿಹಾಸದಲ್ಲಿ ಒಂದು ಧ್ರುವತಾರೆ, ನಿಜ, ಅಂತೆಯೇ, ಅವನಿಗೆ ಸರಿಸಮನಾದ ಗದ್ಯವನ್ನು ಬರೆಯಬಲ್ಲ ಒಬ್ಬ ಶಾಸನಕಾರ ಕರ್ನಾಟಕದಲ್ಲಿದ್ದನೆಂಬ ಸಂಗತಿಯನ್ನು ಅವರು ಗುರುತಿಸಿದ್ದಾರೆ.

ಬಾದಾಮಿ ಚಾಲುಕ್ಯರ ರಾಜಮನೆತನದ ವಿಜಯ ಅಥವಾ ವಿಜ್ಜಿಕೆಯನ್ನು 'ಕರ್ನಾಟೀ' ಎಂದು ಹಿಂದಿನ ಕೃತಿಗಳಲ್ಲಿ ಕರೆಯಲಾಗಿದೆ. ಅವಳ **'ಕೌಮುದೀ ಮಹೋತ್ಸವ'** ಎಂಬ ನಾಟಕವು ಸಂಸ್ಕೃತದಲ್ಲಿನ ಮೊಟ್ಟ ಮೊದಲ ಸ್ತ್ರೀ ರಚಿತ ನಾಟಕವೆಂಬುದು ಯಾರಿಗೆ ತಾನೇ ಹೆಮ್ಮೆ

ಅರ್ಧಂಬರ್ಧ ಮಾಡಿದ ಕೆಲಸ ಎಂದೂ ಸರಿಯಿರುವುದಿಲ್ಲ

ತರದು? ರಾಷ್ಟ್ರಕೂಟರ ಕಾಲದ ಜಿನಸೇನರ ಪೂರ್ವಪುರಾಣವು ಪಂಪನ ಕಾವ್ಯಕ್ಕೆ ವಸ್ತುವನ್ನೊದಗಿಸಿದ ಜೈನ ಸಂಸ್ಕೃತ ಪುರಾಣ, ಅದರ ಪರಿಚಯ ಮಾಡಿಕೊಡುವಾಗ ಅವರು ಕೃತಿ ಚೌರ್ಯದ ಬಗ್ಗೆ ವ್ಯಕ್ತಪಡಿಸುವ ನೋವು ಇಂದಿಗೂ ನಿಜ. ಕೃತಿ ಚೌರ್ಯದ ವಿಧಾನಗಳನ್ನು ಅವರು ನೀಡಿರುವುದು ಮನನೀಯವಾಗಿವೆ. ಜಿನಸೇನರ ಪ್ರಕಾರ, ವ್ಯಕ್ತಿಯೊಬ್ಬ 'ಕುಕವಿ' ಎನ್ನಿಸಿಕೊಳ್ಳುವುದಕ್ಕಿಂತ 'ಅಕವಿ'ಯೆನ್ನಿಸಿಕೊಳ್ಳುವುದು ಮೇಲು ಎಂಬುದು ಎಲ್ಲ ಕಾಲಕ್ಕೂ, ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುವ ಸಾರ್ವಕಾಲಿಕ ಸಲಹೆ. ಆರನೆಯ ವಿಕ್ರಮಾದಿತ್ಯನು ಬಂಗಾಳ, ಅಸ್ಸಾಮ್‌ಗಳನ್ನು ಗೆದ್ದುದರ ಬಗ್ಗೆ ಸ್ವಾಮಿಗಳು ವ್ಯಕ್ತಪಡಿಸಿರುವ ಸಂದೇಹ ನಿರಾಧಾರವಾದುದು. ಅವನು ಬಿಹಾರ- ನೇಪಾಳ ಮತ್ತು ಬಂಗಾಳಗಳನ್ನು ಗೆದ್ದು ಅಲ್ಲಿ ನೆಲೆಯೂರಿಸಿದ ಅವನ ಪ್ರತಿನಿಧಿಗಳೇ ಮಿಥಿಲೆಯ ಕರ್ನಾಟಕ ವಂಶ ಮತ್ತು ಬಂಗಾಳದ ಸೇನಾ ವಂಶಗಳು, ಅವನ ಮಗ ಮೂರನೆಯ ಸೋಮೇಶ್ವರನ ಕೃತಿ 'ಮನಸೋಲ್ಲಾಸ'ವು ಭಾರತದಲ್ಲಿ ರಚಿತವಾಗಿರುವ ಅತಿ ಶ್ರೇಷ್ಠ ವಿಶ್ವಕೋಶ. ಅಂತೆಯೇ ಹದಿನೇಳನೇ ಶತಮಾನದ ಕೆಳದಿ ಬಸವಪ್ಪನಾಯಕನ 'ಶಿವ ತತ್ವ ರತ್ನಾಕರ'ವೂ ಅಂತಹ ವಿಶ್ವಕೋಶಾತ್ಮಕ ಬೃಹತ್‌ಗ್ರಂಥ. ಮಧುರೆಯಿಂದ ಸುಲ್ತಾನನ್ನು ಓಡಿಸಿ ಲ್ಲಿನ ಜನ, ಗುಡಿಗಳನ್ನು ರಕ್ಷಿಸಿದ ವಿಜಯನಗರದ ವೀರ ಕಂಪಣನ ಪತ್ನಿ, ಒಂದನೆಯ ಬುಕ್ಕನ ಸೊಸೆ ಗಂಗಾದೇವಿಯ (ಕ್ರಿ.ಶ. ೧೪೦೦) 'ಮಧುರಾ ವಿಜಯ'ವು ಒಂದು ಐತಿಹಾಸಿಕ ಮಹಾಕಾವ್ಯ. ಸಾಹಿತ್ಯ ಕೃತಿಗಳಲ್ಲವೆಂಬ ಕಾರಣದಿಂದ ಹೆಚ್ಚು ವಿವರಗಳನ್ನು ನೀಡಲು ಅವಕಾಶವಿಲ್ಲವಾದರೂ, ವಿಜ್ಞಾನೇಶ್ವರನ ಮಿತಾಕ್ಷರಾದಂತಹ ಕಾನೂನು ಗ್ರಂಥಗಳ ಪರಿಚಯವೂ ಇಲ್ಲಿದೆ. ಸಂಗೀತ ಶಾಸ್ತ್ರ ಕ್ಷೇತ್ರಕ್ಕೆ ಕರ್ನಾಟಕದ ಕೊಡುಗೆಯಂತೂ ಅಮೋಘ.

ಶ್ರೀ ಸ್ವಾಮೀಜಿಯವರ **'ಸಿದ್ಧಾಂತ ಶಿಖಾಮಣಿ'**, **'ಶ್ರೀಕರ ಭಾಷ್ಯ'**ಗಳ ತೌಲನಿಕ ಅಧ್ಯಯನದ ಗ್ರಂಥವು ಕಳೆದ ತಿಂಗಳಷ್ಟೇ ಬಿಡುಗಡೆಗೊಂಡು ವಿದ್ವಾಂಸರ, ವಿಮರ್ಶಕರ ಗಮನ ಸೆಳೆದಿದೆ.

ಒಂದು ಮಠದ ಮುಖ್ಯಸ್ಥರಾಗಿದ್ದುಕೊಂಡು ಅದರ ಮೇಲುಸ್ತುವಾರಿಯ ಜೊತೆಗೆ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ಡಾ. ಶಿವಬಸವ ಸ್ವಾಮಿಗಳು ಓರ್ವ ಅಪೂರ್ವ ವ್ಯಕ್ತಿಗಳಾಗಿದ್ದಾರೆ. ವೀರಶೈವ ಸಾಹಿತ್ಯ, ಸಮಾಜ ಇವುಗಳ ಬಗ್ಗೆ ಸತ್ಯನಿಷ್ಠುರವಾದ ಧೋರಣೆಯನ್ನು ಹೊಂದಿರುವ ಅವರು ಕವಲ ಗ್ರಂಥಾಭ್ಯಾಸಿಗಳಾಗಿ ಉಳಿಯದೆ ಸಾಮಾಜಿಕ ಚಿಂತಕರೂ ಆಗಿದ್ದಾರೆ. ಆಗಲೇ ಸೂಚಿಸಿದಂತೆ ಅವರು ಕುಶಾಗ್ರಮತಿಗಳಾದ ಉನ್ನತ ಮಟ್ಟದ ಸಂಶೋಧಕರೂ ಹೌದು. ಅವರಿಗೆ ಹಲವು ಸುವರ್ಣ ಪದಕಗಳಲ್ಲದೆ, ಕರ್ನಾಟಕ ಸರ್ಕಾರದ ವತಿಯಿಂದ ೨೦೦೦ನೇ ವರ್ಷದ ಸಂಸ್ಕೃತ ವಿದ್ವಾಂಸರ ರಾಜ್ಯ ಪ್ರಶಸ್ತಿಯೂ ಲಭ್ಯವಾಗಿದೆ. ಪಾರ್ಕಿನ್ಸನ್ ತೊಂದರೆಯಿಂದ ದೇಹ ನರಳುತ್ತಿದ್ದರೂ ಅಂತರಂಗದ ಸಾಧನೆ, ಬಹಿರಂಗದ ಅಧ್ಯಯನಗಳಿಗೆ ಅದು ಹೆಚ್ಚು ಅಡ್ಡಿಯುಂಟು ಮಾಡಿರದಿದ್ದರೆ ಅದಕ್ಕೆ ಅವರ ಕಠೋರ ಛಲವೊಂದೇ ಕಾರಣ.

(ವಿಜಯಕರ್ನಾಟಕ ಸಾಭಾರ)

■

ಉದಾರವಾದ ಕೃತಿ ಮೋಕ್ಷಕ್ಕೆ ಮೊದಲ ಹೆಜ್ಜೆ.

ಸ್ಥಳೀಯ ಕೃಷಿ ಪದ್ಧತಿ V/s ಆಧುನಿಕ ಕೃಷಿ ಪದ್ಧತಿ

- ಪುಷ್ಪಾ ಸುರೇಂದ್ರ

ಸ್ಥಳೀಯ ಕೃಷಿ ಪದ್ಧತಿ ಎಂದರೆ ನಮ್ಮ ಹಿಂದಿನವರ ಜ್ಞಾನಾನುಭವಗಳೆಲ್ಲವನ್ನು ಭಟ್ಟಿ ಇಳಿಸಿಕೊಂಡು ರೂಢಿಸಿಕೊಂಡ ಒಂದು ವ್ಯವಸ್ಥೆ.

ಕೃಷಿಯು ಹಿಂದೆ ಸುಭಿಕ್ಷವಾಗಿತ್ತು. ಆ ಸುಭಿಕ್ಷತೆಯ ಮೇಲೆಯೇ ಸಮಾಜವು ಅವಲಂಬಿತವಾಗಿತ್ತು ಎಂದು ನಂಬುವುದು ಕಷ್ಟ. ಹಾಗೆ ಒಂದು ವೇಳೆ ಕೃಷಿಯು ಅತ್ಯುತ್ತಮ ಫಲವನ್ನೇ ತಂದುಕೊಟ್ಟಿದ್ದರೂ ಅದು 'ಪರಿಪೂರ್ಣ ಪದ್ಧತಿ'ಗಳ ಪ್ರತಿಫಲವೆಂದೇಕೆ ತಿಳಿಯಬೇಕು? ಬರಗಾಲ, ಕ್ಷಾಮ, ಪ್ರವಾಹ, ಕೀಟಬಾಧೆ, ಆಗಲೂ ಇದ್ದವು. ಹಿಂದಿನ ಕಾಲದ ಕೃಷಿ ವ್ಯವಸ್ಥೆಯ ಮುಖ್ಯ ಲಕ್ಷಣವೆಂದರೆ ಅದು ಅವಿಭಕ್ತ ಕುಟುಂಬದ ತಳಹದಿಯ ಮೇಲೆ ನಿಂತದ್ದು. ಶ್ರಮದ ವಿಂಗಡಣೆಯ ಅಂಶವನ್ನೇ ಗಮನಿಸಿದರೆ ಅವಿಭಕ್ತ ಕುಟುಂಬದಲ್ಲಿ ಎಲ್ಲ ಸದಸ್ಯರಿಗೂ ನಿರ್ದಿಷ್ಟ ಕರ್ತವ್ಯಗಳಿರುತ್ತಿದ್ದವು. ತಂತ್ರಜ್ಞಾನ ಬಳಕೆಯು ಅತಿ ಕಡಿಮೆಯಿದ್ದುದರಿಂದ ಚಿಕ್ಕ ಮಕ್ಕಳೂ ಸಹ ಜಾನುವಾರುಗಳನ್ನು ನೋಡಿಕೊಳ್ಳುವುದು ಇತ್ಯಾದಿ ಸಣ್ಣ ಪುಟ್ಟ ಕೆಲಸ ಮಾಡಬೇಕಾಗಿತ್ತು. ಜೀವನೋಪಾಯಕ್ಕಾಗಿ ಕೃಷಿ ಎಂದರೆ ಇಡೀ ಕುಟುಂಬವನ್ನು ತೊಡಗಿಸಿಕೊಂಡ ಚಟುವಟಿಕೆಯಾಗಿತ್ತು. ಶ್ರಮಸಾಂದ್ರ ಕೃಷಿಯಾಗಿತ್ತು ಹಾಗೂ ಕುಟುಂಬದ ಎಲ್ಲ ಅವಶ್ಯಕತೆಗಳನ್ನು ಪೂರೈಸಲು ಬೆಳೆ ವೈವಿಧ್ಯವನ್ನೂ ಜಾರಿಗೆ ತರಲೇಬೇಕಾಗಿತ್ತು.

ಇಂತಹ ಜಾತಿ/ವರ್ಗ ವ್ಯವಸ್ಥೆಯ ಚೌಕಟ್ಟಿನಲ್ಲಿ ರೂಪಿತಗೊಂಡ ಒಂದು ವ್ಯವಸ್ಥೆಯನ್ನು ಈಗಿನ ಕಾಲಕ್ಕೆ 'ಮಾದರಿ' ಎಂದು ಪರಿಗಣಿಸುವ ಮೊದಲು ಕೆಲವೊಂದು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದೇನೆಂದರೆ ಜಾತಿ/ವರ್ಗ ವ್ಯವಸ್ಥೆಯು ನಮಗೆ ಸಂಬಂಧಪಟ್ಟಿಲ್ಲ ಎಂದು ಕೃಷಿ ವಿಜ್ಞಾನಿಗಳು ಕೈಕಟ್ಟಿ ಕೂರುವಂತಿಲ್ಲ. ಅತಿ ಹೆಚ್ಚು ಬೆಳೆ ಪಡೆದು ಯಶಸ್ವೀ ರೈತನೆನಿಸಿಕೊಂಡವನು ಜಮೀನ್ದಾರೀ ಪದ್ಧತಿಯ ಮೂಲಕ ದಮನಕಾರೀ ಆಚರಣೆಗಳ ಮೂಲಕ ಪ್ರಗತಿ ಸಾಧಿಸಿದನೇ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ.

ಪ್ರಜಾಪ್ರಭುತ್ವದ ಹಕ್ಕುಗಳನ್ನು ನಿರಾಕರಿಸುವಂತಹ ವ್ಯವಸ್ಥೆಯನ್ನು ಈಗಿನ ಕಾಲಕ್ಕೆ ಒಂದು ಮಾದರಿಯನ್ನಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಇಂತಹ ಆದರ್ಶ ಸಮಾಜದಲ್ಲೂ ಕೂಡ ಕೃಷಿಬದುಕಿನ ಬವಣೆಗಳಿಂದ ರೋಸಿಹೋದ ರೈತ ಸಮುದಾಯವು, ಕೃಷಿಗಿಂತ ಸುಲಭದ ಕೆಲಸಗಳನ್ನು ಅರಸಿಕೊಂಡು ನಗರಗಳಿಗೆ ವಲಸೆ ಬಂದಿರುವುದನ್ನು ಸಾಮಾನ್ಯವಾಗಿ ಕಾಣಬಹುದು. ಹಿಂದಿನ ಬಹುತೇಕ ಕೃಷಿ ಪದ್ಧತಿಗಳೆಲ್ಲವೂ ಹೊಟ್ಟೆಪಾಡು ಹಾಗೂ ಹಳ್ಳಿಯ/ಸಮುದಾಯದ

ಆಹಾರದ ಬೇಡಿಕೆಗಳನ್ನು ಅವಲಂಬಿಸಿದಂತವು. ಆದರೆ ಈಗಿನ ವಿಶ್ವ ಮಾರುಕಟ್ಟೆ, ತತ್ವದ ಸಂದರ್ಭದಲ್ಲಿ ರೈತನಿಗೆ ತಾನು ಯಾರಿಗಾಗಿ ಉತ್ಪಾದಿಸುತ್ತಿದ್ದೇನೆಂದೇ ಗೊತ್ತಾಗುತ್ತಿಲ್ಲ.

ಈ 'ಸ್ಥಳೀಯ, ಸಾಂಪ್ರದಾಯಿಕ ಪದ್ಧತಿ' ಸಿದ್ಧಾಂತವು ನಮ್ಮ ಸಮಾಜದಲ್ಲಿರುವ ಶ್ರೇಣೀಕೃತ ಜ್ಞಾನ ವ್ಯವಸ್ಥೆಯನ್ನು ಪ್ರಶ್ನಿಸುವುದಿಲ್ಲ. ಜ್ಞಾನವು ಪ್ರಜಾಪ್ರಭುತ್ವ ತತ್ವದ ಪ್ರಕಾರ ಜನಸಾಮಾನ್ಯರಿಗೂ ಮುಟ್ಟುವಂತಿರಬೇಕು ಎಂಬುದನ್ನು ನಿರ್ಲಕ್ಷಿಸುತ್ತದೆ. ಜಾತಿ ಪದ್ಧತಿಯು ಶ್ರೇಣೀಕೃತ ಜ್ಞಾನ ವ್ಯವಸ್ಥೆಗೆ ಪ್ರೋತ್ಸಾಹ ಕೊಟ್ಟಿರುವುದೇ ಅಲ್ಲದೆ 'ಮಾಡುವುದರ ಮತ್ತು ಯೋಚಿಸುವುದರ' ಮಧ್ಯೆ ಇರುವ ಅಂತರವನ್ನು ಇನ್ನೂ ಹೆಚ್ಚಿಸುತ್ತದೆ. ಸಮಾಜದ ಕೆಳಸ್ಥರಗಳಲ್ಲಿ ಇರುವ ಸಮುದಾಯಗಳ ಹಿಡಿತಕ್ಕೆ ಬೌದ್ಧಿಕ ಆಸ್ತಿಯು ಸಿಗದಂತೆ ಮಾಡಿದೆ. ಆದ್ದರಿಂದ 'ಜ್ಞಾನಕ್ಕೆ' ಸಂಬಂಧಿಸಿದಂತೆ, 'ಸಾಂಪ್ರದಾಯಿಕ ಮೂಲ' ಕೃಷಿ ಪದ್ಧತಿಗಳಲ್ಲಿ ಇರುವ ಸಮಸ್ಯೆಗಳೇನೆಂದು ನೋಡೋಣ.

ರೈತರ ಜ್ಞಾನಸಂಪತ್ತು

'ಜ್ಞಾನ'ದಮೂಲ ಹಲವು, ಇದನ್ನು ಔಪಚಾರಿಕ, ಅನೌಪಚಾರಿಕ ಎಂದು ವಿಂಗಡಿಸಬಹುದು. ಕೃಷಿ ವಿಶ್ವವಿದ್ಯಾನಿಲಯಗಳಿಂದ, ಸಂಶೋಧನಾ ಕೇಂದ್ರಗಳಿಂದ, ವಿಜ್ಞಾನಿಗಳಿಂದ ಪಡೆಯುವ ಜ್ಞಾನವು ಔಪಚಾರಿಕ (ಶಾಸ್ತ್ರೀಯ) ಜ್ಞಾನವೆಂದೂ, ರೈತ ಸಮುದಾಯದ ಸುದೀರ್ಘ ಅನುಭವದಿಂದ ಹಾಗೂ ಐತಿಹಾಸಿಕವಾಗಿ ರೂಢಿಗತವಾದ ಆಚರಣೆಗಳನ್ನು ಅನೌಪಚಾರಿಕ ಜ್ಞಾನ ಎಂದೂ ಕರೆಯಬಹುದು. ಇವೆರಡರ ಮಧ್ಯೆ ನಿರಂತರವಾಗಿ ಕೊಡುಕೊಳ್ಳುವಿಕೆ ನಡೆಯುತ್ತಿರಬೇಕಾಗುತ್ತದೆ.

ರೈತರ ಜ್ಞಾನ ಸಂಪತ್ತು ಹಲವಾರು ವರ್ಷಗಳ ನಿರಂತರ ಅಳವಡಿಕೆಯಿಂದ ಹಾಗೂ ಕಾಲಾನುಕ್ರಮದಲ್ಲಿ ಆ ಪದ್ದತಿಗಳ ಇತಿಮಿತಿಗಳನ್ನು ಅರಿತು ಮಾರ್ಪಡಿಸಿಕೊಳ್ಳುವಿಕೆಯಿಂದ ಉಂಟಾದ ಜ್ಞಾನ. ಯಾವುದೇ ಪದ್ಧತಿಯನ್ನು ರೈತರು ಅದು ಕೇವಲ 'ಓಬಿರಾಯನ ಕಾಲದ್ದು' ಎಂಬಕಾರಣಕ್ಕೇ ನಿಲ್ಲಿಸುವುದಿಲ್ಲ. ಅಥವಾ ರೈತರು ಕೃಷಿ ಕ್ಷೇತ್ರದ ಹೊಸ ಸಂಶೋಧನೆಗಳನ್ನು ಹಳೆಯ ಪದ್ಧತಿಗಳನ್ನು ಪಲ್ಲಟಗೊಳಿಸುವ ಉದ್ದೇಶದಿಂದ ಮಾತ್ರವೇ ಅನುಷ್ಠಾನಕ್ಕೆ ತರುವುದಿಲ್ಲ. ಹಾಗೂ ಹೊಸ ಪದ್ಧತಿ/ತತ್ವಗಳನ್ನು ಅಷ್ಟೇ ನಾಟಕೀಯವಾಗಿ ಧುತ್ತನೇ ಜಾರಿಗೆ ತರುವುದೂ ಇಲ್ಲ. ಹೊಸ ಸಂಶೋಧನೆಗಳ ಜ್ಞಾನವನ್ನು ಸನ್ನಿವೇಶಗಳಿಗೆ ತಕ್ಕಂತೆ ಕ್ರಮೇಣ ಅಳವಡಿಸಿಕೊಳ್ಳುವ ಒಂದು ಸಂಕೀರ್ಣ ಪ್ರಕ್ರಿಯೆಯಾದ ಸುಧಾರಿತ ಪದ್ಧತಿಯು ಹಳೆಯದರೊಂದಿಗೆ ಸಂಪೂರ್ಣ ಸಂಬಂಧ ಕಳಚಿಕೊಳ್ಳಬೇಕೆಂದೇನೂ ನಿಯಮವಿಲ್ಲ. ಹೀಗೆ ನಿಧಾನಕ್ಕೆ ಹೊಸ ಪದ್ಧತಿಯನ್ನು ಆಚರಣೆಗೆ ತರಲಿಚ್ಛಿಸುವ ರೈತರನ್ನು 'ಬದಲಾವಣೆಗಳ ವಿರೋಧಿ'ಯೆಂದೇ ಹಣೆ ಪಟ್ಟಿ ಹಚ್ಚಲಾಗುತ್ತದೆ (ಆದರೆ ಪರಿಸರ ಸನ್ನಿವೇಶನಗಳ ವೈಪರಿತ್ಯ, ಅನಿವಾರ್ಯತೆ, ಬರಗಾಲ, ಕೀಟಬಾಧೆ, ನೀರಿನ ಸಮಸ್ಯೆ, ಇತ್ಯಾದಿಗಳಿಗೆ ರೈತರು ತೋರಿಸುವ

ಶಿಕ್ಷಣ ಒಂದು ಕುದುರೆ, ಅನುಭವ ಅದರ ಸವಾರ.

ಸ್ಪಂದನದಲ್ಲಿ ಬದಲಾವಣೆಗಳನ್ನು ಕಾಣಬಹುದು)

ಈಗಿನ ಔಪಚಾರಿಕ ಶಿಕ್ಷಣ ವ್ಯವಸ್ಥೆಯು ಅನೌಪಚಾರಿಕ ಜ್ಞಾನವನ್ನು ಕಡೆಗಣಿಸುತ್ತದೆ. ಸ್ಥಳೀಯ ಜ್ಞಾನ ಮತ್ತು ಅನುಭವಕ್ಕೆ ತೋರಿಸುವ ಈ ಅನಾದರವು, ನಮ್ಮ ಗ್ರಾಮೀಣ ಕಲೆ ಮತ್ತು ಕೃಷಿ ಕೈಗಾರಿಕೋತ್ಪನ್ನಗಳಿಗೆ ಮುಳುವಾಗಿದೆ. ಹಳ್ಳಿಯ ಮಕ್ಕಳಿಗೆ ಕೊಡುವ ಔಪಚಾರಿಕ ಶಿಕ್ಷಣ, ಅವರು ಪಾರಂಪಾರಿಕ ಕೌಶಲ್ಯ, ಅನುಭವ ಹಾಗೂ ಜ್ಞಾನವನ್ನು ಪಡೆದುಕೊಳ್ಳಲು ಬಿಡುವುದಿಲ್ಲ. ಕೃಷಿಬದುಕಿನ ಬಗ್ಗೆ ಅವರಿಗೆ ಅಸಡ್ಡೆ ಬರುವಂತೆ ಮಾಡುತ್ತದೆ. 'ಯಾವಾಗ ಈ ಹಳ್ಳಿ ಬಿಟ್ಟು ಪಟ್ಟಣಕ್ಕೋ ಹೋಗುತ್ತೇವೋ' ಎಂದು ಅವರು ಪರಿತಪಿಸುವಂತೆ ಮಾಡುತ್ತದೆ.

ಹೀಗಾಗಿ ಆಧುನಿಕ, ಔಪಚಾರಿಕ ಶಿಕ್ಷಣದ ಹರಿಕಾರರು 'ಜ್ಞಾನ'ದ ಮೇಲೆ ತಮ್ಮ ಹಿಡಿತ ಸಾಧಿಸುತ್ತಾರೆ. ಹಾಗೂ ಔಪಚಾರಿಕ, ಅನೌಪಚಾರಿಕ ವ್ಯವಸ್ಥೆಗಳ ನಡುವೆ ಒಂದು ಆರೋಗ್ಯಕರ ಸಂವಾದ ಏರ್ಪಡುವುದನ್ನು ತಡೆಯುತ್ತಾರೆ. ಗ್ರಾಮೀಣ ಜ್ಞಾನ ವ್ಯವಸ್ಥೆಯ ಮೇಲೆ ಅತಿ ಶೀಘ್ರವಾಗಿ ಅನೌಪಚಾರಿಕ ಶಿಕ್ಷಣವನ್ನು ಹೇರುತ್ತಾ ಬಂದಿರುವುದರಿಂದ ಈ ಹಿಡಿತವನ್ನು ಸಾಧಿಸಲು ಅವರಿಗೆ ಸಾಧ್ಯವಾಗಿದೆ.

ಔಪಚಾರಿಕ ವ್ಯವಸ್ಥೆಯು, ಈ ಗ್ರಾಮೀಣ ಜ್ಞಾನ ವ್ಯವಸ್ಥೆಗೆ ತನ್ನನ್ನು ತಾನು ಸ... -ಸಿಕೊಂಡು ಮುಂದುವರೆಯುವಷ್ಟು ಅವಕಾಶವನ್ನೇ ಕೊಡಲಿಲ್ಲ. ಹೀಗೆ ಬಳಕೆಗೆ ಬಂದ ... ಪದ್ಧತಿಗಳಾದ ಕೃತಕ ಗೊಬ್ಬರ/ರಾಸಾಯನಿಕಗಳ ಬಳಕೆ ಹಾಗೂ ಕೃಷಿ ವಿಧಾನಗಳು ರೈತರ ಹಿತಕ್ಕೆ ಮತ್ತು ಮನುಷ್ಯನ ಪ್ರಾಣಕ್ಕೆ ಮಾರಕವಾಗಿವೆ. ಉದಾಹರಣೆಗೆ ಹಳೆಯ ಸಾಂಪ್ರದಾಯಿಕ ಧಾನ... ಸ್ಕರಣೆ ಮತ್ತು ಸಂಗ್ರಹಣಾ ವಿಧಾನಗಳು ಈಗ ಹೆಚ್ಚು ಕಡಿಮೆ ಮರೆತೇ ಹೋಗಿರುವು... ದ ಧಾನ್ಯ ಸಂಗ್ರಹಣೆ ಒಂದು 'ಸಮಸ್ಯೆಯಾಗಿ', ಅತಿ ಕಡಿಮೆ/ನಷ್ಟದ ಬೆಲೆಗೆ ಅವುಗಳನ್ನು ರೈತರು ಮಾರಿ ಕೈ ತೊಳೆದುಕೊಳ್ಳಬೇಕಾಗಿ ಬಂದಿದೆ. ಹಿಂದೆ ಉಪಯೋಗದಲ್ಲಿದ್ದ ಧಾನ್ಯ /ಬೀಜ ಸಂಗ್ರಹಗಾರಗಳು / ಕಣಜಗಳು, ಬಡ ರೈತರಿಗೆ ಆಹಾರ ಭದ್ರತೆಯನ್ನು ಕೊಡುತ್ತಿದ್ದವು. ಹಿಂದೆ ಕಷ್ಟ ಕಾಲಕ್ಕೆಂದು ರೈತರು ಜೋಳ, ರಾಗಿ ಇತ್ಯಾದಿಗಳನ್ನು ಯಥೇಚ್ಛವಾಗಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು.

ಈಗಿನ ಪ್ರಪಂಚದಲ್ಲಿ 'ಬದಲಾವಣೆ'ಯೇ ಮೂಲಮಂತ್ರವಾಗಿ ಹೋಗಿದೆ, ಅತಿ ವೇಗವಾಗಿ ಪದ್ಧತಿಗಳನ್ನು ಬದಲಿಸುವ 'ವೈಜ್ಞಾನಿಕ' ಮಾರ್ಗಗಳಿಗೆ ಪರದಾಡುವ, ಹೊಸತನ್ನು ಸಂಶೋಧಿಸಿ ಪ್ರಯೋಗಿಸುವ, ಹಳೆಯದನ್ನು ಸಾರಾಸಗಟು ತಿರಸ್ಕರಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಬೆಳವಣಿಗೆ/ಬದಲಾವಣೆ ಇಲ್ಲದೆ ಇರುವುದು ಎಂದರೆ ನಿಂತ ಕೊಳೆ ನೀರಿನಂತೆ ಎಂದೇ ಅರ್ಥೈಸಬೇಕಾಗಿಲ್ಲ. ನಾನು ಅದನ್ನು ಹೈಬರ್‌ನೇಷನ್ ಸ್ಥಿತಿ ಅಥವಾ ಅವಶ್ಯಕವಾದ ನಿರೀಕ್ಷಾಕಾಲ ಎಂದು ಕರೆಯಲಿಚ್ಛಿಸುತ್ತೇನೆ. ನಿಸರ್ಗದಲ್ಲಿ ಪ್ರಾಣಿ,ಪಕ್ಷಿ, ಗಿಡಮರ ಎಲ್ಲವೂ ಕೆಲಕಾಲ ತಮ್ಮ ಬೆಳವಣಿಗೆಯನ್ನು ಸ್ತಬ್ಧಗೊಳಿಸಿಕೊಳ್ಳುತ್ತವೆ. ಅದು 'ವಿಶ್ರಾಂತಿ'ಯ ಕಾಲವಾಗಿರುತ್ತದೆಯೇ ವಿನಾ, ಕುಂಠಿತ ಬೆಳವಣಿಗೆ ಅಥವಾ ಅವಸಾನವನ್ನು ಸೂಚಿಸುವುದಿಲ್ಲ.

ಮಾತು ಕೊಡಲು ನಿಧಾನಿಸು, ನಿಭಾಯಿಸಲು ತ್ವರಿತನಾಗು.

ಹೊಸತನ್ನು ಬರಮಾಡಿಕೊಳ್ಳುವ ಆತುರದಲ್ಲಿ ಹಳೆಯ ಅನುಭವ/ಪದ್ಧತಿಗಳನ್ನು ಅರ್ಥಮಾಡಿಕೊಳ್ಳುವ ಮುಂಚೆಯೇ ಮಾಯವಾಗುತ್ತಿವೆ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ, ನಾವು ಉಪಯೋಗಿಸುವ ಕಳೆನಾಶಕಗಳು, 'ಕಳೆ' ಎಂದು ಕರೆಸಿಕೊಂಡ ಸಸ್ಯಗಳು ಯಾವುವು? ಅವುಗಳ ಆಹಾರ/ಪೌಷ್ಠಿಕ ಮೌಲ್ಯ, ಪರಿಸರ ಮೌಲ್ಯ, ಸಾಮುದಾಯಿಕ ಉಪಯುಕ್ತತೆ ಎಷ್ಟು? ಎಂಬುದನ್ನು ಅಭ್ಯಾಸ ಮಾಡುವ ಮುಂಚೆಯೇ ಅವುಗಳನ್ನು ನಾವು ನಾಶಪಡಿಸಿಯಾಗಿರುತ್ತದೆ. ಒಮ್ಮೆ ಭತ್ತದ ಬದಲು ಶುಂಠಿ ಬೆಳೆಯಲಾಗುತ್ತದೆ, ಇನ್ನೊಮ್ಮೆ ಬೊಂಬನ್ನೋ, ತಾಳೆ ಎಣ್ಣೆ ಮರಗಳನ್ನೋ ಬೆಳೆಯಲಾಗುತ್ತದೆ. ಹೀಗೆ ನಮ್ಮಿಷ್ಟಕ್ಕೆ ತಕ್ಕಂತೆ ಪ್ರಕೃತಿಯನ್ನು ಭೂಮಿಯನ್ನು ತಾಳಹಾಕುವಂತೆ ಮಾಡಲು ಸಾಧ್ಯವಿಲ್ಲ. ಕೃಷಿ ಇಲಾಖೆಯ ಅಧಿಕಾರಿಗಳಿಗೆ ಕೃಷಿಕರ ಶ್ರಮ, ಸಮಯದ ಬಗ್ಗೆ ಗೌರವವಿಲ್ಲ. ಹೊಸ ತಳಿ/ಬೆಳೆಗಳನ್ನು ಶಿಫಾರಸು ಮಾಡುವುದರಲ್ಲಿ ಅತಿ ಉತ್ಸಾಹ ತೋರುವ ಅವರು, ಆ ಹೊಸ ಬೆಳೆಗೆ ತಗಲುವ ಖರ್ಚು ವೆಚ್ಚದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಉದಾಹರಣೆಗೆ, ೩ ದಶಕಗಳಿಂದ ನೋಡಿರದಷ್ಟು ಬರಗಾಲ ಈಗ ಬಂದಿರುವ ಹಿನ್ನೆಲೆಯಲ್ಲಿ ಐ.ಸಿ.ಎ.ಆರ್. (Indian Council of Agricultural Research)ನರು 'ಪರ್ಯಾಯ ಬೆಳೆ ಬೆಳೆಯಿರಿ' ಎಂದು ರೈತರಿಗೆ ಅಮೂಲ್ಯ ಸಲಹೆ ದಯಪಾಲಿಸಿದ್ದಾರೆ! ಈ ಪರ್ಯಾಯ ಬೆಳೆಗಳಿಗೆ, ಬದಲಾವಣೆ/ಹೊಂದಾಣಿಕೆ ಮಾಡಿಕೊಳ್ಳಲು ಹಿಡಿಯುವ ಸಮಯ ಎಷ್ಟು? ಯಾವ ಯಾವ ಖರ್ಚುಗಳನ್ನು ರೈತರ ಭರಿಸಬೇಕಾಗುತ್ತದೆ? ಬಂಡವಾಳ ಎಷ್ಟು? ಇದನ್ನು ಕರಾರುವಕ್ಕಾಗಿ ಹೇಳುವವರಿಲ್ಲ. ಇಂತಹ ತುದಿನಾಲಿಗೆಯ ಸಲಹೆಗಳಲ್ಲಿ ಯಾವ ನಿಜವಾದ ರೈತನ ಹಿತಾಸಕ್ತಿಗಳೂ ಇರುವುದಿಲ್ಲ. ಈ ಸಲಹೆಗಳು ರಾಜಕಾರಣಿಗಳನ್ನೋ, ಅಧಿಕಾರ ವರ್ಗದವರನ್ನೋ ಮೆಚ್ಚಿಸಬಹುದಷ್ಟೇ.ಈ ಮೇಲಿನ ಪ್ರಶ್ನೆಗಳಿಗೆಲ್ಲಾ ರೈತರೇ ಉತ್ತರ ಕಂಡುಕೊಳ್ಳಬೇಕಾಗಿದೆ.

ಆಧುನಿಕ ಕೃಷಿ ವಿಶ್ವವಿದ್ಯಾನಿಲಯದ ಪದವೀಧರರು ತಮ್ಮ ಜ್ಞಾನವನ್ನು ತಮ್ಮ ಶಿಕ್ಷಣದ ಸೀಮಿತ ಅವಧಿಯೊಳಗೆ ಪಡೆದಿರುತ್ತಾರೆ. ಈ ಪದವೀಧರರ ಕ್ಷೇತ್ರಾನುಭವವು ಸಂಶೋಧನಾಲಯ ಹಾಗೂ ಅದಕ್ಕೆ ಪೂರಕವಾಗಿರುವ ಪ್ರಯೋಗ ಶಾಲೆಯ ಪರಿಸರವಿರುವ ಭೂಮಿಗೆ ಸೀಮಿತವಾಗಿರುತ್ತದ. ಈ ಸಂಶೋಧನಾಲಯಗಳಿಗೆ ಕೆಲಸಗಾರರ ಹಾಗೂ ಆರ್ಥಿಕ ಸಂಪನ್ಮೂಲದ ಕೊರತೆಯಿರುವುದಿಲ್ಲ. ಕೃಷಿ ವಿಜ್ಞಾನಿ/ಸಂಶೋಧಕರೇನೂ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬೇಕಾಗಿಲ್ಲ. ಅದಕ್ಕೆ ಬಡ್ಡಿಯನ್ನೂ ಕಟ್ಟಬೇಕಾಗಿಲ್ಲವಲ್ಲ? ಬೆಳೆ ವೈಫಲ್ಯ, ಮಳೆಯ ಅಭಾವದಿಂದ ನಷ್ಟ ಇತ್ಯಾದಿಗಳಿಂದ ಅವರ ಸಂಬಳದಲ್ಲೇನೂ. ಕಡಿತವಾಗುವುದಿಲ್ಲ. ರೈತರು ಎದುರಿಸುವ ಹತಾಶೆ, ಸಂಕಟ, ಸಂದಿಗ್ಧಗಳು, ಭರನಿರಸನಗಳನ್ನು ಈ ವಿಜ್ಞಾನಿಗಳೆಂದೂ ಅರಿಯಲು ಸಾಧ್ಯವಿಲ್ಲ. 'ಕೃಷಿ' ಎಂಬುದು ಅವರ ಮಟ್ಟಿಗೆ ಸಂಶೋಧನೆಗೆಂದೇ ಇರುವ 'ಕಚ್ಚಾ' ಕ್ಷೇತ್ರ ಹಾಗೂ ಅವರ ಸಂಶೋಧನೆ ಮುಗಿದಾಗ, ಅವರಿಗೆ ಬಡ್ತಿ ತಂದು ಕೊಡುವ ಸಾಧನೆ, ಅಷ್ಟೇ ಹೊರತು ಬೇರೇನಲ್ಲ.

ನಮ್ರತೆಯಿಂದ ಕೂಡಿದ ಜ್ಞಾನ ದ್ವಿಗುಣವಾಗಿ ಪ್ರಕಾಶಿಸುತ್ತದೆ.

ಕೃಷಿಬದುಕಿನಲ್ಲಿ ಉಂಟಾಗುವ ಆತಂಕಕಾರಿ ಸಂಕಷ್ಟಗಳು, ರೈತರಂತೆ ಆತ್ಮಹತ್ಯೆ ಮಾಡಿಕೊಳ್ಳಲು ವಿಜ್ಞಾನಿಗಳನ್ನು ಪ್ರೇರೇಪಿಸುವಿದಿಲ್ಲವಲ್ಲ? ಅಥವಾ ಹೊಸ ಕೆಲಸದ ಬೇಟೆಯಲ್ಲಿ ಅವರೇನು ವಲಸೆ ಹೋಗಬೇಕಿಲ್ಲ. ಬದುಕಿನ ಸನ್ನಿವೇಶಗಳಲ್ಲಿರುವ ಇಂತಹ ಸಂಪೂರ್ಣ ವೈರುಧ್ಯಗಳು ಹಾಗೂ ಸಾವು-ಬದುಕಿನ ಪ್ರಶ್ನೆಗಳು, ಕೃಷಿ ಪದವೀಧರರಿಗೆ ರೈತರ ಜ್ಞಾನವನ್ನು ನಿರ್ಲಕ್ಷಿಸುವ, ಅಪ್ರಸ್ತುತವೆಂದು ತಳ್ಳಿ ಹಾಕುವ, ಕಂದಾಚಾರವೆಂದು ಪರಿಭಾವಿಸುವ ಸ್ವಾತಂತ್ರ ಮತ್ತು ಹಕ್ಕನ್ನು ಕೊಟ್ಟಿರುವಂತೆ ಕಾಣುತ್ತದೆ. ಹೀಗಿದ್ದರೂ ಕೂಡ, ತಮಗೆ ಅವಶ್ಯಕತೆಯಿದ್ದಾಗಲೆಲ್ಲಾ ವಿಜ್ಞಾನಿಗಳು ರೈತನ ಜ್ಞಾನ ಸಂಪತ್ತನ್ನು ಉಪಯೋಗಿಸಿಕೊಂಡು, ಅವುಗಳ ಮೇಲೆ ಸಂಶೋಧನಾ ಲೇಖನಗಳನ್ನು ಬರೆದು, ಅವುಗಳನ್ನು ತಮ್ಮ 'ಸ್ವಂತ' ಆವಿಷ್ಕಾರಗಳೆಂದು ಯಾವುದೇ ಎಗ್ಗಿಲ್ಲದೆ ಬೋರ್ಡು ಹಾಕಿ ಕೊಳ್ಳುತ್ತಾರೆ. ಆದರೆ ಎರವಲು ಪಡೆದ ಅಂಥ ಬೌದ್ಧಿಕ ಆಸ್ತಿಗೆ ಯಾರಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ. ಕೃಷಿಕ ಕಟುಂಬಗಳಿಂದ ಬಂದ ಪದವೀಧರರು ಕೂಡ, 'ವಾಸ್ತುಸ್ಥಿತಿ'ಯನ್ನು 'ಉತ್ತಮ'ಗೊಳಿಸುವ, 'ಬದಲಾಯಿಸುವ', 'ಹೊಸದನ್ನ' ಚಾಲ್ತಿಗೆ ತರುವ, ಕೆಲವೊಮ್ಮೆ ಹಳೆಯ ತಂತ್ರಜ್ಞಾನವನ್ನೇ ಹೊಸ ಹೆಸರಿನಲ್ಲಿ ಚಲಾವಣೆ ಮಾಡುವ, ಅದಕ್ಕೆ 'ಬೌದ್ಧಿಕ ಸ್ವಾಮ್ಯ ಹಕ್ಕನ್ನೂ' ಪಡೆಯುವ ಹುನ್ನಾರದಲ್ಲಿರುತ್ತಾರೆ! ಆದರೆ ಕೃಷಿಯೆಂದರೆ ನಮ್ಮ ಪೂರ್ವಜರ ಅನುಭವಾಧಾರಿತ ಜ್ಞಾನ ಸಂಪತ್ತನ್ನು ರಕ್ಷಿಸುವುದು ಕೂಡಾ ಆಗಿದೆ. ಈಗಿನ ಯುವ ಜನಾಂಗವು 'ಭಿನ್ನ' ವಾದುದೇನನ್ನೋ 'ಮಾಡಿ ತೋರಿಸುವ' ವಿಚಿತ್ರ ಮಾನಸಿಕ ಒತ್ತಡಕ್ಕೆ ಸಿಕ್ಕಿಕೊಂಡಿರುತ್ತಾರೆ. ಅದರಲ್ಲೂ ಕೃಷಿ ಪದವೀಧರರಂತೂ 'ಹೊಸದರ' ಮಂತ್ರದಂಡ ಹಿಡಿದೇ ಕೃಷಿಯಲ್ಲಿ ಕಿನ್ನರಲೋಕ ಸೃಷ್ಟಿಸಲು ಹೊರಡುತ್ತಾರೆ. (ರೈತರ ಜ್ಞಾನವು ದೇಸೀ ಸಂಸ್ಕೃತಿ, ಪರಿಸರದ ಮೇಲೆ ಅವಲಂಬಿಸಿ ಬೆಳೆದು ಬಂದಿರುವುದರಿಂದ) ಕೃಷಿ ಪದವೀದರರು ಸ್ಥಳೀಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಉದಾಹರಣೆಗೆ ಅವರು ಸ್ಥಳೀಯವಾಗಿ ಬಳಕೆಯಲ್ಲಿರುವ ಮಳೆ ನೀರು ಸಂಗ್ರಹಣಾ ವಿಧಾನಗಳನ್ನು ಅಭ್ಯಾಸ ಮಾಡದೇ, ಹೊಸ ತಂತ್ರಜ್ಞಾನವನ್ನು ಅವರ ಮೆಲೆ ಹೇರುತ್ತಿರುವುದನ್ನು ನಾವು ನೋಡಬಹುದು.

ಆಧುನಿಕ ಕೃಷಿಯಲ್ಲಿ ಪ್ರಧಾನ ಪಾತ್ರ ವಹಿಸುವ ಕಾರ್ಮಿಕ ಸಂಬಂಧಗಳನ್ನು ತಜ್ಞರು ವಿಶ್ಲೇಷಿಸಬೇಕು. ಕೃಷಿ ಸಾಮಾಜಿಕ ಪರಿಸರದ ಬಗ್ಗೆ ಅವರು ತೋರುವ ನಿಷ್ಕಾಳಜಿಯಿಂದ, ಇಂದು ಅನೇಕ ವೈಜ್ಞಾನಿಕ/ಆಧುನಿಕ ಸಂಶೋಧನೆಗಳು ಜನರನ್ನು ಮುಟ್ಟಲು ಅಸಮರ್ಥವಾಗಿವೆ. ಕೃಷಿ ಪದ್ದತಿಗೆ ಅಳವಡಿಸಿಕೊಳ್ಳಲು ಅಸಾಧ್ಯವಾಗಿದೆ. ಕೃಷಿ ವಿಜ್ಞಾನಿಗಳು ಎಷ್ಟು ಕಾಲ ಹೀಗೆ ಕೃಷಿ-ಸಮಾಜದ ರಾಜಕಾರಣದ ಬಗ್ಗೆ ಕಣ್ಣು ಮುಚ್ಚಿಕೂರಲು ಸಾಧ್ಯ? ಒಬ್ಬ ರೈತನಿಗೆ, ತನ್ನ ಕಷ್ಟಗಳಿಗೂ ಸಮಾಜದ ಮೇಲ್ಪದರಲ್ಲಿ ನಡೆಯುವ ರಾಜಕಾರಣ/ಸೈದ್ಧಾಂತಿಕ ಚಲನೆಗಳಿಗೂ ಸಂಬಂಧ ಕಾಣದೇ ಹೋಗಬಹುದು. ಆದರೆ ಕೃಷಿ ವಿದ್ಯಾರ್ಥಿಗಳು/ಸಂಶೋಧಕರಾದರೂ ಈ ಸಂಬಂಧಗಳನ್ನು ಮತ್ತು ಅದರ ಮೂಲೋದ್ದೇಶಗಳನ್ನು ಅರಿಯುವ ಪ್ರಯತ್ನ ಅವರಿಗೆ ಈ ಆಂತರಿಕ ಬಗ್ಗೆ ಕೃಷಿ ರಾಜಕಾರಣದ ಒಳಸುಳಿಗಳ ಬಗ್ಗೆ ತರಬೇತಿ ಕೂಡಬೇಕು. ಇತ್ತೀಚೆಗೆ,

ನೈತಿಕವಾಗಿ ತಪ್ಪಾಗಿರುವಂಥದಾವುದೂ ರಾಜಕೀಯವಾಗಿ ಸರಿಯಿರುವುದಿಲ್ಲ.

ಸ್ಥಳೀಯ ಹಾಗೂ ರಾಷ್ಟ್ರೀಯ ಕೃಷಿ ನೀತಿಗಳು ವಿಶ್ವ ವಾಣಿಜ್ಯ ಸಂಘಟನೆಯಂಥ ಅಂತಾರಾಷ್ಟ್ರೀಯ ಮಟ್ಟದ ನಿರ್ಧಾರಗಳಿಂದ ಹೆಚ್ಚಾಗಿ ಪ್ರಭಾವಿತಗೊಂಡಿವೆ. ರೈತ ಮತ್ತು ಅವನ ದೇಸೀ ಜ್ಞಾನವನ್ನು ಇಂಥ ಹೊರಗಿನ (ರಾಜಕೀಯ ಪ್ರೇರಿತ) ತತ್ವಗಳ ಪ್ರಭಾವದ ಎದುರಲ್ಲಿ ನಿಲ್ಲುವಂತೆ ಶಕ್ತಿಯುತಗೊಳಿಸುವುದು ಹೇಗೆ ಎಂಬುದೇ ಮುಖ್ಯ ಪ್ರಶ್ನೆ.

ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ಸ್ಥಳಿಯ ವಿಧಾನಗಳ ಸುಸ್ಥಿರತೆಯನ್ನು ಗಮನಿಸಬೇಕಾಗಿದೆ. ಭೂಮಿಯ ಧಾರಣ ಸಾಮರ್ಥ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅದರ ಸೃಷ್ಟಿಸುವ ಶಕ್ತಿಯ ಮೆಲೆ ಅಸಹಜ ಒತ್ತಾಯ ಹೇರುವುದೇ ಆಧುನಿಕ ಕೃಷಿಯ ಮೂಲತತ್ವ. 'ಭೂಮಿಯನ್ನು ಆಯಾ ಸಮಯಕ್ಕೆ ಜೀವನೋಪಾಯಕ್ಕೆ ಬೇಕಾದ ಬೆಳೆ ತೆಗೆಯಲು ಮಾತ್ರವಷ್ಟೇ ಏಕೆ, ನಮಗಿಷ್ಟಬಂದಂತೆ ಯಾವ ಕಾಲದಲ್ಲಿ ಬೇಕಾದರೂ ಅತಿ ಹೆಚ್ಚು ಪ್ರಮಾಣದಲ್ಲಿ ಬೆಳೆ ತೆಗೆದು ಸಂಗ್ರಹ ಮಾಡಿಟ್ಟುಕೊಳ್ಳಲು ಆಗುವಂತೆ ದುಡಿಸಿಕೊಳ್ಳಬಹುದು' ಎಂಬ ಕಲ್ಪನೆಯಿಂದ ಭೂಮಿಯ ನೈಸರ್ಗಿಕ ಸಂಪನ್ಮೂಲಗಳಿಗೆ ತೀವ್ರ ಧಕ್ಕೆಯಾಗಿದೆ. ಕೃಷಿ ಭೂಮಿಯಿಂದ ಅತಿ ದೂರವಿರುವ ನಗರ ಜನಸಮುದಾಯವು ಕೃಷಿ ಉತ್ಪನ್ನಗಳನ್ನು ಯಥೇಚ್ಛವಾಗಿ ಬಳಸಿದರೂ, ಕೃಷಿ ತ್ಯಾಜ್ಯಗಳನ್ನು ಮತ್ತೆ ಭೂಮಿಗೆ ಮರಳಿಸಲು ಅದರಿಂದ ಸಾಧ್ಯವಾಗಿಲ್ಲ. ಈ ಏಕಮುಖ ಸಂಪನ್ಮೂಲ ಹರಿವಿನಿಂದ ಕೃಷಿ ಭೂಮಿಯು ಸಾರ ವಂಚಿತವಾಗಿದೆ. (ಭೂಮಿಯಲ್ಲಿ ಸಂಪನ್ಮೂಲದ ಅಸಮತೋಲನ ಆಲ್ಬರ್ಟ್ ಹೋವಾರ್ಡ್ಸ್‌ನ ಕೃತಿ "Angricultural Testament" ಈ ಸಮಸ್ಯೆಕಡೆ ನಮ್ಮ ಗಮನ ಸೆಳೆಯುತ್ತದೆ. ಆಧುನಿಕ ಕೃಷಿಯು, ಸಾಮಾಜಿಕ ಅಸಮಾನತೆಗೆ ಹುಡುಕಿದ ಅಡ್ಡದಾರಿ ಪರಿಹಾರವೆನಿಸಿಕೊಂಡಿದೆ. ಭೂ ಸುಧಾರಣಾ ಸಂಬಂಧಿತ ಸಮಸ್ಯೆಗಳು, ಭೂಮಿಯ ಅಸಮಾನ ವಿಂಗಡಣೆ, ಇತ್ಯಾದಿಗಳ ಬಗ್ಗೆ ಇತ್ತೀಚೆಗೆ ಯಾವ ಸರ್ಕಾರವೂ ತಲೆ ಕೆಡಿಸಿಕೊಳ್ಳಲು ಹೋಗಿಲ್ಲ. ಈ ಸನ್ನಿವೇಶದ ದುರುಪಯೋಗಪಡಿಸಿಕೊಳ್ಳಲು ಹೊಂಚುತ್ತಿದ್ದ ರಾಸಾಯನಿಕ ಕೈಗಾರಿಕೆಗಳು, ಸರಿಯಾದ ಸಮಯದಲ್ಲಿ ಅವತರಿಸಿದ್ದವು. ಕೃಷಿಯಲ್ಲಿ ತೊಡಗಿಸಿಕೊಳ್ಳದ, ನಿರಂತರ ಬೆಳೆಯುತ್ತಲೇ ಹೋದ ಜನಸಂಖ್ಯೆಗೆ ಬೇಕಾದ ಅತಿ ಹೆಚ್ಚು ಪ್ರಮಾಣದ ಆಹಾರ ಉತ್ಪಾದಿಸಲು ಇವು ಮುನ್ನುಗ್ಗಿದವು.

ಕೃಷಿ ಸಮುದಾಯಕ್ಕೆ ಏಳಿಗೆ ಉಂಟು ಮಾಡುವಲ್ಲಿ ರಾಸಾಯನಿಕ ಕೃಷಿಯ ವಿಫಲತೆ, ಬೆಳೆಗಳಿಗೆ ತಗುಲಿರುವ ಕೀಟಭಾಧೆ, ಮಣ್ಣು/ನೀರಿನ ಸಂಪನ್ಮೂಲದ ದುಸ್ಥಿತಿ, ಮನುಷ್ಯ/ಪ್ರಾಣಿಗಳ ಆರೋಗ್ಯದ ಮೇಲಾಗಿರುವ ದುಷ್ಪಪ್ರಭಾವ ಇವೆಲ್ಲವನ್ನು ನೋಡಿ ಕೆಲ ವಿಜ್ಞಾನಿಗಳು ಬಹುಶಃ ಹಿಂದಿನ ವಿದಾನಗಳೇನಾದರೂ ಈಗಿನ ಸಮಸ್ಯೆಗಳಿಗೆ ಪರಿಹಾರ ತೋರಿಸಬಹುದೇ ಎಂದು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ. ಸಾಂಪ್ರದಾಯಿಕ ವಿಧಾನಗಳು ಸುಸ್ಥಿರ ಕೃಷಿಗೆ ಮಾರ್ಗದರ್ಶಿಗಳಾಗಬಹುದು ಎಂಬ ಸತ್ಯವನ್ನು ಒಪ್ಪಿಕೊಳ್ಳಲೂ ತಯಾರಿದ್ದಾರೆ. ಸಾವಯವ ಕೃಷಿ ವಿಧಾನಗಳ ಬಗ್ಗೆ ಈಗ ಜನ ಹೆಚ್ಚು ಒಲವು ತೋರುತ್ತಿದ್ದಾರೆ. ಇಂದಿನ ಎಲ್ಲಾ ಕೃಷಿ ಸಮಸ್ಯೆಗಳು ಹಾಗೂ ರಾಸಾಯನಿಕ ಕೀಟನಾಶಕ/ಗೊಬ್ಬರ ಕೈಗಾರಿಕೆಗಳ ಲಂಚ ತಿನ್ನುತ್ತಿರುವ,

ಕೃಷಿ ಸಿದ್ಧಾಂತವನ್ನೂ ರೂಪಿಸುವದರಲ್ಲಿರುವ ಧ್ಯೇಯಬದ್ಧತೆಯ ಅಭಾವ ಇವೆಲ್ಲವೂ ಜನರನ್ನೂ ರಾಸಾಯನಿಕ ಕೃಷಿಗೆ ಪರ್ಯಾಯ ಹುಡುಕಲು ಪ್ರೇರೇಪಿಸಿದೆ.

ರಾಸಾಯನಿಕ ಕೃಷಿಯಿಂದ ಭಾರತದ ಬಹುತೇಕ ಭೂಮಿಯು ಒಣಭೂಮಿ/ಬಂಜರು ಭೂಮಿಯಾಗಿ ಮಾರ್ಪಾಟು ಹೊಂದಿದೆ. ಹೆಚ್ಚು ಹೆಚ್ಚು ಅಂತರ್ಜಲವನ್ನು ದುರ್ಬಳಕೆ ಮಾಡುವ ಕೃಷಿಯು ಸುಸ್ಥಿರವಾಗಿರುವುದಿಲ್ಲ. ಸ್ಥಳೀಯವಾಗಿ ನಮ್ಮ ದೇಶದಲ್ಲೇ ಬೇಡಿಕೆಯಿಂದ (ಮಾರುಕಟ್ಟೆಯಲ್ಲಿರುವ) ಹಾಗೂ ನಮ್ಮ ದೇಶದ ಪ್ರಚಲಿತ ಆಹಾರ ಸಂಸ್ಕೃತಿಯನ್ನು ಆಧಾರಿಸಿರುವ ಬೆಳೆಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸಬೇಕು. ವಿಶ್ವ ಮಾರುಕಟ್ಟೆಯ ಮೇಲೆ ಅವಲಂಬಿತವಾಗಿರುವ ಕೃಷಿಯು ಒಂದು ಹೆಚ್ಚು ಜೂಜು.

'ರಫ್ತು ಮಾಡಲೆಂದೇ ಇರುವ' ಕೃಷಿ ವ್ಯವಸ್ಥೆಯ ಒಳ ಸಮಸ್ಯೆಗಳು ಅನೇಕ. ಅದು ರಾಷ್ಟ್ರದ ಆಹಾರ ಸುಭದ್ರತೆಯನ್ನು ಅನೇಕ ದೇಶಗಳ ಕೈಗೊಂಬೆಯಾಗಿಸುತ್ತದೆ. ಭಾರತದಂತಹ ದೊಡ್ಡ ರಾಷ್ಟ್ರದ ಆಹಾರ ಸುಭದ್ರತೆಗೆ ಆತಂಕಕಾರಿಯಾದ ಯಾವುದೇ ವ್ಯವಸ್ಥೆಯು ಮುಂದೆ ಭವಿಷ್ಯದಲ್ಲಿ ಸಾಮಾಜಿಕ ಸ್ಥಿರತೆಗೆ ಹಾಗೂ ರಾಷ್ಟ್ರದ ಪರಮಾಧಿಕಾರಕ್ಕೆ ಕುತ್ತು ತರುತ್ತದೆ. ಇಂಥ ಪಾಲಿಸಿಗಳು, ಭಾರತದ ಸ್ವಾತಂತ್ರ್ಯಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟ ನಾಯಕರ/ಚಿಂತಕರ ಕನಸು ಮತ್ತು ಗುರಿಗಳ ವಿರುದ್ಧ ಹಾಗೂ ನಮ್ಮ ದೀರ್ಘಕಾಲದ ಸುಭದ್ರತೆ, ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆಂದು ಸಾರ್ವಜನಿಕ ಸಂಸ್ಥೆಗಳಲ್ಲಿ ತೊಡಗಿಸಿದ್ದ ಸಂಪನ್ಮೂಲಗಳ ವಿರುದ್ಧ ಕೆಲಸ ಮಾಡುತ್ತಿವೆ. ಹೊರಗಿನ ಆಹಾರೋತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಕೃಷಿ ವ್ಯವಸ್ಥೆಯು ನಮ್ಮ ಸಾವಿರಾರು ರೈತರ ಜೀವನೋಪಾಯಕ್ಕೆ ತೊಂದರೆಯುಂಟು ಮಾಡುವುದೇ ಅಲ್ಲದೇ ನಮ್ಮ ಕೃಷಿ ವಿಶ್ವವಿದ್ಯಾಲಯಗಳ, ಸಂಶೋಧನಾಲಯಗಳ, ವಿಜ್ಞಾನಿ ಸಮುದಾಯಗಳ ಅಳಿವಿಗೂ ಕಾರಣವಾಗಬಹುದು.

ಈಗ ಅವಶ್ಯಕವಾಗಿರುವುದು ಕೃಷಿಕರ ಅನುಭವಗಳನ್ನು ಗಮನವಿಟ್ಟು ಕೇಳುವ ತಾಳ್ಮೆ ಹಾಗೂ ನಿರ್ದಿಷ್ಟ ಸ್ಥಳೀಯ ಸಮಸ್ಯೆಗಳಿಗೆ ಅಲ್ಲಿಯೇಪರಿಹಾರ ಹುಡುಕುವ ವಿವೇಚನ, ರೈತನಿಗೆ ಬದಲಾಗಿ, ಎಲ್ಲಾ ಸಾಂಸ್ಥಿಕ ಬೆಂಬಲವೂ ಈಗ ಕೃಷಿ ಕಾರ್ಪೋರೇಟ್‌ಗಳಿಗೆ ಸಿಗುತ್ತಿದೆ. ಇದರ ಪರಿಣಾಮ ಏನೆಂದರೆ ಬಡ ರೈತನು ಎನಗೂಲಿ ಕಾರ್ಮಿಕನಾಗಿ ನಗರದ ಕಡೆ ಕಾಲು ಹಾಕಿದ್ದಾನೆ. ಕೃಷಿ ಅಧಿಕಾರಿ ವರ್ಗ ಮತ್ತು ಶಾಸಕರು ತಮ್ಮ 'ಕಾರ್ಯನೀತಿ'ಯ ವಿಫಲತೆಯನ್ನು ಒಪ್ಪಿಕೊಳ್ಳುವ ಬದಲು ಈಗ ಅದನ್ನು 'ಕೃಷಿ ಕ್ಷೇತ್ರದ ವಿಫಲತೆ' ಎನ್ನುತ್ತಾ ಅದಕ್ಕೆ 'ಸಾಧನೆ ಇಲ್ಲದ ಕ್ಷೇತ್ರ' ಎಂಬ ಹಣೆ ಪಟ್ಟಿ ಹಚ್ಚಿದ್ದಾರೆ. ಇದೆಲ್ಲದರ ಮಧ್ಯೆ ಭಾರತೀಯ ರೈತನಿಗೆ ಭವಿಷ್ಯವಿದೆಯೇ ಹಾಗೂ ಆಹಾರ ಸುಭದ್ರತೆಯು ನಶಿಸುತ್ತಿದೆಯೇ ಎಂಬ ಗುಮಾನಿ ಏಳುತ್ತದೆ, (ಸಧ್ಯಕ್ಕಂತೂ!) ಆಹಾರವನ್ನು ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳಬಹುದಾದ ಖುಷಿಯಲ್ಲಿರುವ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಜಾಣಗುರುಡು ನಟಿಸುತ್ತಿದೆ.

ಧೈರ್ಯವುಳ್ಳ ಮನುಷ್ಯ ಬಹು ಮತವನ್ನು ಸೃಷ್ಟಿಸುತ್ತಾನೆ.

ಪಾರಂಪರಿಕ ಪದ್ಧತಿಗಳ ಹಿಂದಿರುವ ತಾತ್ವಿಕ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ, ಅದು ಆಧುನಿಕ ಕೃಷಿಗೆ ಯಾವುದೇ ಪ್ರಯೋಜನ ನೀಡುವುದಿಲ್ಲ. ಮಣ್ಣಿನ ಫಲವತ್ತತೆ, ನೀರಿನ ಬಳಕೆ ಹಾಗೂ ಜನರಿಗೆ ಪೌಷ್ಠಿಕ ಆಹಾರಾದ ಪೂರೈಕೆ ಈ ಎಲ್ಲ ಮೂಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡರೆ ಸಮುದಾಯದ ಆಹಾರ ಸುಭದ್ರತೆ ಹಾಗೂ ಪರಿಸರದ ಸುಭದ್ರತೆಯ ಜೊತೆಗೆ ರೈತರ ಸುಧಾರಣೆಯೂ ಆಗುತ್ತದೆ.

ಈಗಾಗಲೇ ಆಗಿರುವ ಎಲ್ಲಾ ಅನಾಹುತವನ್ನು ಪುನಃ ಹಿಂದಿನ ಮಾರ್ಗಕ್ಕೆ ಹಿಂದಿರುಗಿದರೆ ಸರಿ ಮಾಡಲು ಸಾಧ್ಯವಿಲ್ಲ ನಿಜ ಹಾಗೆಂದು ಈಗೇನೂ ಮಾಡಲು ಸಾಧ್ಯವೇ ಇಲ್ಲ ಎಂದು ಕೈಚೆಲ್ಲಿ ಕೂರಬೇಕಾಗಿಲ್ಲ. ಈ ದುರಂತವನ್ನು ನಿಲ್ಲಿಸುವ ಪ್ರಯತ್ನವನ್ನು ಮೊದಲು ಮಾಡಬೇಕಿರುವುದು ವಿಜ್ಞಾನ, ಮತ್ತು ಕೃಷಿ ಮೇಲೆ ಪರಾವಲಂಬಿಗಳಾಗಿರುವ ವಿಜ್ಞಾನಿಗಳು ಹಾಗೂ ಕೃಷಿಯ ದೀರ್ಘ ಕಾಲದ ವ್ಯಾಧಿಗಳಿಗೆ ಸಮಯೋಚಿತ ಪರಿಹಾರಗಳನ್ನು ನಿರ್ಧಿಷ್ಟವಾಗಿ ಬಗೆಹರಿಸುವ ಯೋಜನೆಯೆ ಮಾಡದ ಅಧಿಕಾರಿ ವರ್ಗ.

ಕೃಷಿಯ ಅಳಿವು ಉಳಿವಿನ ಮೇಲೆ ಈ ಎಲ್ಲರ ಅಳಿವು ಉಳಿವು ನಿಂತಿದೆ ಎಂಬ ಪರಿವೆಯೇ ಇಲ್ಲದೆ, 'ಎತ್ತು ಏರಿಗೆಳೆದರೆ ಕೋಣ ನೀರಿಗೆಳೆದಂತೆ' ಎಂಬ ಗಾದೆ ಮಾತಿನಂತೆ ಕೆಲಸ ಮಾಡುವ ಇವರು ಭಾರತೀಯ ಕೃಷಿ ಸಂಸ್ಕೃತಿಯ ಮೂಲೋದ್ದೇಶಗಳಿಗೆ ವಿರುದ್ಧವಾಗಿಯೇ ಯೋಚಿಸುತ್ತಾರೆ ಎಂಬುದೇ ವಿಪರ್ಯಾಸದ ಸಂಗತಿ.

ಕಾರ್ಪೋರೇಟ್ ಉದ್ಯಮಿಗಳೆ ಭೂಮಿ, ಆಹಾರ ಉತ್ಪಾದನೆ, ಹಂಚಿಕೆ ಮಾರುಕಟ್ಟೆ ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಂಡಿರುವ ಯೂರೋಪ್ ರಾಷ್ಟ್ರಗಳಂತಲ್ಲದೇ ಭಾರತ ಇನ್ನೂ ಕೃಷಿ ಪ್ರಧಾನ ಹಳ್ಳಿಗಳ ದೇಶವಾಗಲೇ ಉಳಿದಿರುವುದು ನಮ್ಮ ಅದೃಷ್ಟವೆನ್ನಬೇಕು. ನಮ್ಮ ರೈತರ ಕೈಯಲ್ಲಿ ಕೃಷಿಯು ಇನ್ನೂ ಸುರಕ್ಷಿತವಾಗಿ ಉಳಿದಿದೆ. ಆದರೂ ಕೃಷಿ ತಜ್ಞರು ಹಾಗೂ ಅಧಿಕಾರಗಳು ರಾಸಾಯನಿಕ ಕೈಗಾರಿಕೆಗಳ ಜೊತೆ 'ಅಪವಿತ್ರ ಮೈತ್ರಿ' ಹೊಂದಿ, ಕೃಷಿ ಕ್ಷೇತ್ರವನ್ನು 'ಉದ್ಧಾರ' ಮಾಡಲು ಹೊರಟಿರುವುದು ಗಾಬರಿಯ ಸಂಗತಿ, ರೈತರನ್ನು, ಸ್ಥಳೀಯ ವ್ಯವಸ್ಥೆಯನ್ನು ಅವರು ದುರ್ಬಲಗೊಳಿಸುತ್ತಿದ್ದಾರೆ.

ಒಟ್ಟಿನಲ್ಲಿ ಕೃಷಿಯಲ್ಲಿ ಹೇಗೆ ನೋಡಿದರೂ ಕಡೆಗೆ ಮುಖ್ಯವಾಗಿ ನಮ್ಮನ್ನು ಕಾಡುವುದು ಕುಟುಂಬ ಮಟ್ಟದ ಹಾಗೂ ರಾಷ್ಟ್ರೀಯ ಮಟ್ಟದ ಆಹಾರದ ಸುಭದ್ರತೆಯ ಸಮಸ್ಯೆ. ಆರ್ಥಿಕವಾಗಿ ಹಾಗೂ ಪಾರಂಪರಿಕವಾಗಿ, ಸ್ಥಳೀಯ ವಿಧಾನಗಳು ತಮ್ಮ ಸುಸ್ಥಿರತೆಯನ್ನು ಸಿದ್ಧಪಡಿಸಿ ತೋರಿಸಿವೆ. ಆದರೆ ಸಿದ್ಧಾಂತ ರೂಪಿಸುವವರಿಂದ ಹಾಗೂ ಕೃಷಿ ತಜ್ಞರಿಂದ ಇದಕ್ಕೆ ಹೆಚ್ಚಿನ ಮನ್ನಣೆ ದೊರೆತಿಲ್ಲ. ರಾಷ್ಟ್ರಮಟ್ಟದಲ್ಲಿ ಈ ಸಾಂಪ್ರದಾಯಿಕ ಘುಸ್ಥಿರ ವ್ಯವಸ್ಥೆಗೆ ಎಲ್ಲಿಯವರೆಗೆ ಮನ್ನಣೆ ಸಿಗುವುದಿಲ್ಲವೋ ಅಲ್ಲಿಯವರೆಗೆ ಇವು ಸ್ಥಳೀಯವಾಗೇ ಉಳಿದುಹೋಗಿ ಇವುಗಳ ಪರಿಣಾಮವು ಕೆಲವೇ ಪ್ರಯೋಗಶೀಲ ಕೃಷಿ ಸಮುದಾಯಗಳಿಗೆ ಸೀಮಿತವಾಗಿ ಇರುತ್ತದೆ.*

(ಅನು: ಸುಮ ಎಂಬಾರ್) ■

ನಿಮ್ಮ ಆಗತ್ಯಗಳನ್ನು ಕಡಿಮೆ ಮಾಡಿಕೊಳ್ಳಿ. ಆಗ ನೀವು ಶ್ರೀಮಂತರಾಗುತ್ತೀರಿ.

ಜನಪದ ನಿಲಯದ ಅಂತರಂಗದಲ್ಲಿ...೨



ಸುರೇಂದ್ರ ಕೌಲಗಿ

"ನಿಲಯ" ಎಂದಾಕ್ಷಣ ಹಲವಾರು ಮನಸ್ಸುಗಳಲ್ಲಿ ಒಂದು ದೊಡ್ಡದಾದ ಆಧುನಿಕ ಮನೆಯ ಕಲ್ಪನೆ ಬರಬಹುದು ಆದರೆ ಇತ್ತೀಚಿಗಷ್ಟೇ ಸುಧಾರಣೆಗೊಂಡಿರುವ ಮನೆ ತನ್ನ ಹಳತಾದ ಹಾಗೂ ದುರ್ಬಲಗೊಂಡ ಗೋಡೆಗಳ ಬದಲಾಗಿ ಅರ್ಧ ಇಟ್ಟಿಗೆ, ಅರ್ಧ ಮಣ್ಣಿನ ಗೋಡೆಗಳನ್ನೂ, ಹಳ್ಳಿ ಹೆಂಚುಗಳ ಬದಲಾಗಿ ಮಂಗಳೂರು ಹೆಂಚುಗಳನ್ನೂ ಹೊಂದಿದೆ. ಈ ಸುಧಾರಣೆ ಕೈಗೊಳ್ಳಲು ಮುಖ್ಯ ಕಾರಣವೇನೆಂದರೆ ಈ ಮನೆ ಸುಮಾರು ೧೦೦ ವರ್ಷಗಳಷ್ಟು ಹಳೆಯದಾಗಿತ್ತು. ಮೇಲುಕೋಟೆಯು ಕೋತಿಗಳ ಆವಾಸಸ್ಥಾನ ಆಗಿರುವುದರಂದ ಅವು ಮನೆಯ ಹೆಂಚಿನ ಮೇಲೆ ಕುಣಿದಾಡಿ ಚಾವಣಿಯನ್ನು ಅಸ್ತವ್ಯಸ್ತಗೊಳಿಸುತ್ತಿದ್ದವು. ಅದರ ಪರಿಣಾಮವಾಗಿ ಮಳೆಗಾಲದಲ್ಲಿ ಮನೆ ಬಹಳ ಸೋರುತ್ತಿತ್ತು. ಮಳೆಯ ನೀರು ಮಣ್ಣಿನ ಗೋಡೆಗಳ ಮೇಲೂ ಬೀಳುತ್ತಿದ್ದುದರಿಂದ ಗೋಡೆಗಳು ಕ್ರಮೇಣ ಅಪಾಯದ ಮಟ್ಟಕ್ಕೆ ತಲುಪುತ್ತಿದ್ದವು. ಮನೆಯನ್ನು ಮಳೆಯ ನೀರಿನಿಂದ ರಕ್ಷಿಸಲು ಮಳೆಗಾಲಕ್ಕೆ ಮುನ್ನ ಹೆಂಚುಗಳನ್ನು ಸರಿಪಡಿಸಬೇಕಾಗುತ್ತಿತ್ತು. ಆಗ ಇನ್ನೊಂದು ಸಮಸ್ಯೆ ಎದುರಾಗುತ್ತಿತ್ತು. ಮುರಿದು ಹೋದ ಹೆಂಚುಗಳ ಬದಲಿಗೆ ಹೊಸ ಹೆಂಚು ಹಾಕಬೇಕೆಂದರೆ ನಾಡು ಹೆಂಚುಗಳ ತಯಾರಿಕೆ ಕಡಿಮೆಯಾಗಿದ್ದುದರಿಂದ ಅವುಗಳನ್ನು ಸಂಪಾದಿಸುವುದು ಕಷ್ಟವಾಗುತ್ತಿತ್ತು.

ಅಲ್ಲದೆ ಹೊಸ ಹೆಂಚುಗಳನ್ನು ಹಾಕಿ ಸರಿ ಮಾಡಲು, ಹೊಸ ಬಿದಿರುಗಳನ್ನು, ಹೊಸ ಹಗ್ಗಗಳನ್ನು ಹೊಂದಿಸಬೇಕಾದುದರ ಜೊತೆಗೆ ಒಂದು ಅಂಕಣಕ್ಕೆ ಒಂದು ನೂರು ರೂಪಾಯಿಗಳಂತೆ ಕೂಲಿ ಕೊಡಬೇಕಾಗುತ್ತಿತ್ತು. ಇಷ್ಟೆಲ್ಲ ಮಾಡಿದ ಮೇಲೆ ಒಟ್ಟು ಖರ್ಚು ಒಂದರಿಂದ ಒಂದೂರವರೆ ಸಾವಿರ ರೂಪಾಯಿ ಆಗುತ್ತಿತ್ತು. ಪುನಃ ಕೋತಿಗಳು, ಪುನ ರಿಪೇರಿ, ಈ ರೀತಿ ನಲ್ವತ್ತು ವರ್ಷಗಳ ಕಾಲ ಈ ಚಕ್ರ ಸುತ್ತಿತ್ತು, ಹಲಗೆಗಳ ಮೇಲೆ ಮಣ್ಣು ಇದ್ದುದರಿಂದ ಮಣ್ಣು ಸದಾ ಕೆಳಗೆ ಉದುರುತ್ತಿತ್ತು. ಮತ್ತು ಹಲಗೆಗಳಿಗೆ ಗೆಜ್ಜಲು ಕಾಟ ಪ್ರಾರಂಭವಾಯಿತು. ಮೇಲ್ಭಾಗದ ಗೋಡೆಗಳೆಲ್ಲವೂ ದಬ್ಬೆ ಗೋಡೆಗಳಾಗಿದ್ದವು. ಅಂದರೆ ಬಿದುರಿನಲ್ಲಿ ಮಣ್ಣು ತುಂಬಿದ ಗೋಡೆಗಳಾಗಿದ್ದವು. ಮಣ್ಣು ನೆಲವಾಗಿದ್ದರಿಂದ ಧೂಳಿನಿಂದ ಪಾರಾಗಲು ಪ್ರತಿ ಹದಿನೈದು. ದಿನಗಳಿಗೊಮ್ಮೆ ಸಗಣಿಯಿಂದ ಸಾರಿಸಬೇಕಾಗುತ್ತಿತ್ತು. ಸಾರಿಸುವ ಕೆಲಸ ಕಷ್ಟದಾಯಕವಾಗಿತ್ತು. ಅಕ್ಕಪಕ್ಕದವರ ಮನೆಯಿಂದ ಸಗಣಿ ಹೊಂದಿಸುವುದೂ ಕಷ್ಟವಾಗಿತ್ತು.

ಅಲ್ಲದೆ, ಈ ಮನೆಗೆ ಒಳ್ಳೆಯ ಬಚ್ಚಲುಮನೆಯಿರಲಿಲ್ಲ. ಮನೆಗೆ ಬಂದಂಥ ಅತಿಥಿಗಳಿಗೆ ಇದರಿಂದಾಗಿ ಬಹಳ ಮುಜುಗರವಾಗುತ್ತಿತ್ತು. ಅತಿಥಿಗಳಿಗಾಗುವ ಮುಜುಗುರ ನಮ್ಮನ್ನೂ

ಮುಜುಗರಕ್ಕೆ ಒಳಪಡಿಸುತ್ತಿತ್ತು. ಆದ್ದರಿಂದ ಈ ಹಳೆ ಮನೆ ರಿಪೇರಿ ಮಾಡಿಸುವುದು ಅಗತ್ಯ ಎಂಬ ವಿಚಾರ ಮನದಲ್ಲಿ ಬೇರೂರಲು ಪ್ರಾರಂಭವಾಯಿತು. ಈ ವಿಚಾರ ಹಾಗೆಯೇ ಕಾರ್ಯಗತವಾಗದೇ ಮನಸ್ಸಿನಲ್ಲಿ ಹತ್ತಾರು ವರ್ಷ ಉಳಿಯಿತು. ಕೊನೆಗೊಮ್ಮೆ ಮನೆಯ ಸುಧಾರಣೆಯ ಕೆಲಸವನ್ನು ಕೈಗೆತ್ತಿಕೊಳ್ಳುವ ಘಳಿಗೆ ಕೂಡಿ ಬಂದಿತು. ಅದೂ ಸಹ ಆಕಸ್ಮಿಕ ಟ್ರಸ್ಟಿನ ಅಭಿಮಾನಿ ದಾನಿಗಳಲ್ಲಿ ಒಬ್ಬರಾದ ಬೆಂಗಳೂರಿನ ವಿಶ್ವನಾಥ್ ಎಂಬುವವರ ಮುಂದೆ ಈ ವಿಚಾರವನ್ನು ಮುಂದಿಟ್ಟಾಗ ಅವರು ಧನ ಸಹಾಯ ಮಾಡಲು ಮುಂದೆ ಬಂದರು. ಒಂದು ಕರಾರಿನೊಂದಿಗೆ 'ನಾನು ಮಾಡುವ ಸಹಾಯವನ್ನು ಪ್ರಸಿದ್ಧಗೊಳಿಸಕೂಡದು. ಯಾರ ಮುಂದೆಯೂ ಹೇಳಕೂಡದು' ಈಗ ಅವರ ಈ ಮಾತನ್ನು ಜನಪದ ನಿಲಯದ ಅಂತರಂಗವನ್ನು ಬಹಿರಂಗಗೊಳಿಸುವ ಸಂದರ್ಭದಲ್ಲಿ ಹೇಳುತ್ತಿರುವುದು ಒಂದು ಅರ್ಥದಲ್ಲಿ ಕೊಟ್ಟ ಮಾತನ್ನು ತಪ್ಪಿದಂತಾಗುತ್ತಿದೆ. ಆದರೆ ಆ ಉದಾರ ಮನಸ್ಸಿನ ವ್ಯಕ್ತಿಯ ಸಹಾಯ ಸಕಾಲಕ್ಕೆ ದೊರೆಯದೇ ಹೋಗಿದ್ದರೆ ಈಗ ನಮ್ಮೆಲ್ಲ ಮುಂದೆ ಇರುವ ಜನಪದ ನಿಲಯ ಈಗಿನಂತಿರುತ್ತಿರಲಿಲ್ಲ.

ಹಳೆ ಮನೆ ಸುಧಾರಣೆಯ ಕೆಲಸವೇನೋ ಪ್ರಾರಂಭವಾಯಿತು. ಆದರೆ ಅದರೊಂದಿಗೆ ನಾವು ನಿರೀಕ್ಷಿಸಿದ್ದಕ್ಕಿಂತಲೂ ಖರ್ಚು ಬೆಳೆಯತೊಡಗಿತು, ಆಂಜನೇಯನ ಬಾಲದಂತೆ. ಮುದುಕಿಯ ಅಲಂಕಾರ, ಹಳೆ ಮನೆ ಸುಧಾರಣೆ ಎರಡೂ ಒಂದೇ ಎಂಬ ಗಾದೆಯ ಮಾತು ನೆನಪಿಗೆ ಬರಲಾರಂಭಿಸಿತು. ಆದರೆ ಕೆಲಸಕ್ಕೆ ಕೈ ಹಾಕಲಾಗಿದೆ. ಪೂರ್ತ ಮಾಡಲೇ ಬೇಕು ಇನ್ನೊಂದು ಸಲ ಈ ಕೆಲಸವನ್ನು ಕೈಗೆತ್ತಿ ಕೊಳ್ಳಲಾಗುವುದಿಲ್ಲ. ಆದ್ದರಿಂದ ವಿಧಿಯಿಲ್ಲದೆ ಪುನಃ ಆ ಸಹೃದಯಿ ಮಿತ್ರರನ್ನೇ ವಿನಂತಿಸಿಕೊಂಡಾಗ ಅವರು ಪುನಃ ಅದೇ ಕರಾರಿನ ಮೇಲೆ ಯಾವ ಅಳುಕೂ ಇಲ್ಲದೆ ತಕ್ಷಣ ಎರಡನೆ ಕಂತಿನ ಸಹಾಯ ಮಾಡಿದ್ದರು. ಕೆಲಸ ಮುಂದುವರೆಯಿತು. ಆದರೂ ಸಹ ಹಣ ಸಾಲದೆ ಬಂತು. ಆಗ ಟ್ರಸ್ಟಿನ ಧರ್ಮದರ್ಶಿಗಳು ಸಹಾಯಕ್ಕೆ ಬಂದರು. ಟ್ರಸ್ಟಿನ ಮೂಲ ನಿಧಿಯನ್ನು ಉಪಯೋಗಿಸಿಕೊಂಡು ಕೆಲಸ ಮುಗಿಸುವಂತೆ ಅವಕಾಶ ಮಾಡಿ ಕೊಟ್ಟು ನೆರವಾದರು. ಐದು ತಿಂಗಳ ಶ್ರಮದ ನಂತರ ಹಳೆ ಮನೆ 'ಜನಪದ ನಿಲಯ'ವಾಗಿ ರೂಪತಾಳಿತು. ಮನೆಯ ಈ ರೂಪಾಂತರದೊಂದಿಗೆ ಒಂದು ಹಳೆ ತಲೆ ಮಾರಿನ ಕಥೆಯೂ ನಿಲುಗಡೆಗೆ ಬಂದಿತು.

ಈ ಮನೆ ಮೇಲುಕೋಟೆಯ ಕಲ್ಯಾಣಿ ಬಳಿ ಸುಮಾರು ೧೦೦ ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದಾಗ ಅದು ಪೆನುಗೊಂಡೆ ರಂಗಾಚಾರ್ಯರಿಗೆ ಸೇರಿತ್ತು. ಇವರು ಮೂಲತಃ ಆಂಧ್ರ ಪ್ರದೇಶದ ಪೆನಗೊಂಡೆಯವರು. ಶ್ರೀ ರಾಮಾನುಜಾ ಚಾರ್ಯರ ಕಾಲಕ್ಕೆ ಇವರ ಮನೆತನದವರು ಆಂಧ್ರದಿಂದ ಮೇಲುಕೋಟೆಗೆ ವಲಸೆ ಬಂದರು. ನಂತರ ಅವರಿಗೆ ಮೈಸೂರಿನ ಪರಕಾಲಮಠದ ಪ್ರತಿನಿಧಿಯಾಗಿ ಶ್ರೀ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಕೈಂಕರ್ಯ ಮಾಡುವ ಕೆಲಸ ದೊರೆಯಿತು. ಕಾಲಕ್ರಮೇಣ ರಂಗಾಚಾರ್ಯರ ಮನೆತನದಲ್ಲಿ ಬದಲಾವಣೆಗಳಾದವು. ರಂಗಾಚಾರ್ಯರು ವಿಧಿವಶರಾದರು. ಅವರ ಮಗ ದೇಶಿಕಾಚಾರ್ಯರು ಗುಂಡಮ್ಮ ಎಂಬುವರನ್ನು ಮದುವೆಯಾಗಿ ಮೂರುಜನ ಗಂಡು ಮಕ್ಕಳನ್ನು, ನಾಲ್ಕು ಜನ ಹೆಣ್ಣು ಮಕ್ಕಳನ್ನು ಪಡೆದರು. ಗಂಡು ಮಕ್ಕಳಲ್ಲಿ ಹಿರಿಯರಾದವರು ನರಸಿಂಹರಂಗನ್. ಇವರು 'ಮನು' ಎಂಬ ಕಾವ್ಯ

ಸಾಲವನ್ನು ತೆಗೆದುಕೊಂಡವನು ತನ್ನ ಸ್ವಾತಂತ್ರ್ಯವನ್ನು ಮಾರುತ್ತಾನೆ.

ನಾಮದಿಂದ ಸುಪ್ರಸಿದ್ಧರಾಗಿದ್ದಾರೆ. ಇವರ ಮೂಲಕವೇ ಜನಪದ ನಿಲಯದ ಹಳೆ ಮನೆಯನ್ನು ಖರೀದಿಸಲಾಯಿತು. ಇವರಿಗೆ ತಮ್ಮ ಮನೆತನದ ಈ ಹಳೆ ಮನೆಯನ್ನು ಮಾರುವುದು ಭಾವನಾತ್ಮಕವಾಗಿ ಕಷ್ಟಕರವೆನಿಸಿತು. ಆದರೆ ಮೇಲುಕೋಟೆಯಲ್ಲಿ ಪ್ರಗತಿಯ ಅವಕಾಶಗಳು ಕಡಿಮೆ ಇರುವುದರಿಂದ ತಮ್ಮ ಹಾಗೂ ಮುಂದಿನ ತಲೆಮಾರಿನವರ ಒಳ್ಳೆಯ ಭವಿಷ್ಯಕ್ಕಾಗಿ ಮೈಸೂರಿನಲ್ಲಿ ನೆಲೆಸಲು ತೀರ್ಮಾನ ಕೈಗೊಂಡಿದ್ದರಿಂದ ಈ ಮನೆಯನ್ನು ಮಾರುವುದು ಸಹ ಸೂಕ್ತವೆನಿಸಿತು. ಹಿರಿಯರ ಮನೆಯನ್ನು ಮಾರುವುದಾದರೆ ಇರುವ ಎಲ್ಲ ಮಕ್ಕಳಿಗೂ ಸ್ವಲ್ಪವಾದರೂ ಹಣ ದೊರೆಯಬೇಕೆಂಬ ಲೆಕ್ಕಾಚಾರ ಹಾಕಿ ಹಳೆ ಮನೆಯ ಬೆಲೆಯನ್ನು ಮೂರು ಲಕ್ಷ ರೂಪಾಯಿಗಳಿಗೆ ನಿಗದಿಪಡಿಸಲಾಯಿತು. ಅಂತಿಮವಾಗಿ ೧೯೯೭ರಲ್ಲಿ ಜನಪದ ಸೇವಾ ಟ್ರಸ್ಟ್ ಹೆಸರಿನಲ್ಲಿ ರಿಜಿಸ್ಟರ್ ಆಯಿತು.

ಮುಂದೆ ೨೦೦೩ನೇ ಇಸವಿಯಲ್ಲಿ ಹಳೆ ಮನೆಯನ್ನು 'ಜನಪದ ನಿಲಯ'ವನ್ನಾಗಿ ೫ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಪರಿವರ್ತಿಸಲಾಯಿತು. ಹೀಗೆ ಈಗಿನ ಜನಪದ ನಿಲಯದ ಒಟ್ಟು ಖರ್ಚು ೮ ಲಕ್ಷ ರೂಪಾಯಿಗಳು.

ಜನಪದ ನಿಲಯದ ಪೂರ್ವೋತ್ತರ ಅಂತರಂಗದ ಸಂಗತಿಗಳು ಮುಂದೆ ಕ್ರಮಶಃ. ■

ಸನ್ಮಾನ್ಯರೊಂದಿಗೆ.....

ಮಾನ್ಯರೆ,

ಶುದ್ಧತೆ, ಸ್ವಚ್ಛತೆ, ಸಾತ್ವಿಕತೆಯ ಪ್ರತೀಕವೇ ಬಿಳಿ ಬಣ್ಣ. ಮಹಾತ್ಮಾ ಗಾಂಧಿಯೂ ಸೇರಿದಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿ ಯಾದವರೆಲ್ಲರ ಉಡುಪು ಬಿಳಿ ಖಾದಿ ಬಟ್ಟೆ. ಗಾಂಧಿಯವರ ಚಿತ್ರವಿರುವ ಬಿಳಿ ಬಣ್ಣದ ಜನಪದ ವಿಚಾರ ಸಂದರ್ಭಕ್ಕೆ ಅತ್ಯಂತ ಸುಕ್ತವಾಗಿದೆ-ಗಾಂಧಿಯವರ ಜೀವನ ಅದ್ವಿತೀಯ. ಅವರ ಜೀವನದ ಪ್ರತಿಯೊಂದು ಘಟನೆಯೂ 'ಕಳೆದು ಹೋದ ಪೆನ್ಸಿಲ್' ಅಥವಾ 'ಜೇನುತುಪ್ಪ' ದಷ್ಟು ಕನಿಷ್ಟವಾದರೂ ಗಾಂಧೀಜಿಯವರು ಎಷ್ಟು ಅಸಾಮಾನ್ಯ ವ್ಯಕ್ತಿಯೆಂದು ಸಾರಿಸಾರಿ ಹೇಳುತ್ತವೆ. ವಿಶ್ವವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಹೇಳಿದಂತೆ "ಗಾಂಧಿಯಂತಹ ಒಬ್ಬ ವ್ಯಕ್ತಿ ಮೂಳೆ ಮಾಂಸದೊಂದಿಗೆ ಈ ಭೂಮಿಯ ಮೇಲೆ ನಡೆದಾಡಿದ ಎಂಬುದನ್ನೇ ಮುಂದಿನ ಜನಾಂಗವು ನಂಬುವುದಿಲ್ಲ. ಇದು ಸತ್ಯ. ಗಾಂಧೀಜಿಯವರದು ಅಂತಹ ಉತ್ಕೃಷ ವ್ಯಕ್ತಿತ್ವ.

ಈ ಸಂಚಿಕೆಯಲ್ಲಿರುವ ಗಾಂಧಿ ಬಗೆಗಿನ ಎಲ್ಲ ಲೇಖನಗಳೂ ಸುಂದರವಾಗಿ ಮೂಡಿಬಂದು ಚಿಂತನೆಗೆ ದಾರಿ ಮಾಡಿಕೊಟ್ಟಿವೆ. ಇದಕ್ಕಾಗಿ ಧನ್ಯವಾದಗಳು.

ಮೈಸೂರು — ***ಜಿ. ವೈದೇಹಿ***

ಮಾನ್ಯರೆ,

ಅಕ್ಟೋಬರ್ ತಿಂಗಳ ಜನಪದ ವಿಚಾರ ಉತ್ತಮವಾಗಿ ಹೊರಬಂದಿದೆ. ಗೋಹತ್ಯ ನಿಷೇಧ ಕುರಿತು ಇರುವ ಲೇಖನ ಉತ್ತಮವಾಗಿದೆ ಉಮಾಕಾಂತ್ ಭಟ್ಟ ಅವರ ''ಭಾರತೀಯ ಸಂಸ್ಕಾರ ದೃಷ್ಟಿ'' ಲೇಖನ ತುಂಬಾ ಉತ್ತಮವಾಗಿದೆ ಭಟ್ಟರ ಈ ಲೇಖನ ಎಲ್ಲರೂ ಓದಲೇ ಬೇಕಾದ ಲೇಖನವಾಗಿದೆ.

ಮದ್ದೂರು — ***ಪ್ರೊ. ಅರ್ಜುನಪುರಿ ಅಪ್ಪಾಜಿಗೌಡ (ದೂರವಾಣಿ ಮೂಲಕ)***

ಪುಸ್ತಕ ವಿಚಾರ

ಏಳು ಖ್ಯಾತ ವಿಜ್ಞಾನಿಗಳ ಜೀವನ ಚರಿತ್ರೆ ಮತ್ತು ಚಿಂತನೆ

ಲೇಖಕರು ಪ್ರೊ. ಕೆ. ಶ್ರೀನಿವಾಸನ್

ಪ್ರೊ. ಕೆ. ಶ್ರೀನಿವಾಸನ್ ಬರೆದಿರುವ ಏಳು ಖ್ಯಾತ ವಿಜ್ಞಾನಿಗಳ ಜೀವನ ಚರಿತ್ರೆ ಮತ್ತು ಚಿಂತನೆ ಪುಸ್ತಕದಲ್ಲಿ ನಿರೋಲಸ್ ಕೋಪರ್ನಿಕಸ್, ಗೆಲಿಲಿಯೋ, ಬರ್ಟ್ರಾಂಡ್ ರಸೆಲ್, ಅರ್ನೆಸ್ಟ್ ರುದಫರ್ಡ್, ಆಲ್‌ಭರ್ಟ್ ಐನ್‌ಸ್ಟೈನ್, ಸಿ.ವಿ. ರಾಮನ್, ಸುವೇಂದ್ರನಾಥ ಬೋಸ್ ಈ ಏಳು ವಿಜ್ಞಾನಿಗಳ ಜೀವನ ಚರಿತ್ರೆ ಮತ್ತು ಚಿಂತನೆಯನ್ನು ಪರಿಚಯ ಮಾಡಿಕೊಡಲಾಗಿದೆ.

ಕೊಪರ್ನಿಕಸ್: ಸೂರ್ಯ ಕೇಂದ್ರೀಯ ಸಿದ್ಧಾಂತ ಹೇಗೆ ರೂಪಿತವಾಯಿತು ಮತ್ತು ಇದು ಹೇಗೆ ಟಾಲೆಮಿಯ ಭೂ ಕೇಂದ್ರತ ಸಿದ್ಧಾಂತಕ್ಕೆ ಹೊಸ ತಿರುವನ್ನು ತಂದು ಕೊಟ್ಟಿತು. ಎಂಬುದರ ಬಗ್ಗೆ ಮಾಹಿತಿಯನ್ನು ಲೇಖಕರು ತಿಳಿಸಿದ್ದಾರೆ. ಕೊಪರ್ನಿಕಸನ ಅಧ್ಯಯನ ಶೀಲತೆಯನ್ನು ಮತ್ತು ಅವನ ಚಿಂತನ ಶೀಲತೆಯನ್ನು ತಿಳಿಸುತ್ತಾ ಕೊನೆಯಲ್ಲಿ ಅವನ ಬಗ್ಗೆ ಲೇಖಕರು ಈ ರೀತಿ ತಿಳಿಸಿದ್ದಾರೆ.

'ಕೋಪರ್ನಿಕಸ್ ಪ್ರತಿಪಾದಿಸಿದ ಸೂರ್ಯ ಕೇಂದ್ರೀಯ ಸಿದ್ಧಾಂತವು ಮಾನವನ ಬೌದ್ಧಿಕ ಬೆಳವಣಿಗೆಗೆ ಅತ್ಯಂತ ಮಹತ್ವದ ಕೊಡುಗೆ ಎನ್ನುವುದರಲ್ಲಿ ಸಂದೇಹವಿಲ್ಲ. ಅದಕ್ಕೂ ಮಿಗಿಲಾಗಿ ಅಸಹನೆ, ದುತಾಂಧತೆ ಮತ್ತು ಅವೈಚಾರಿಕತೆಗಳಿಂದ ತುಂಬಿದ್ದ ಅಂದಿನ ಪರಿಸ್ಥಿತಿಯಲ್ಲಿ ವೈಚಾರಿಕ ಸ್ವಾತಂತ್ರ್ಯಕ್ಕಾಗಿ ದಿಟ್ಟತನದಿಂದ ಹೋರಾಡಿದವರ ಪೈಕಿ ಕೊಪರ್ನಿಕಸ್ ಒಬ್ಬ ನಾಗಿದ್ದನು ಎಂಬುದನ್ನು ಮರೆಯಲಾಗದು. ವೈಚಾರಿಕ ಸ್ವಾತಂತ್ರ್ಯವನ್ನು ಪುನಃ ಗಳಿಸಿದ ಪರಿಣಾಮವಾಗಿ ಮಾನವನ ಬೌದ್ಧಿಕ ಜೀವನವು ವಿಕಾಸಗೊಂಡು ಅಭಿವೃದ್ಧಿ ಶೀಲವಾಯಿತು. ಅಲ್ಲದೆ, ಈ ವೈಚಾರಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿ ವಿಜ್ಞಾನದ ಬೆಳವಣಿಗೆಗೆ ಅಂಕುರಾರ್ಪಣ ಮಾಡಿದ ಕೋಪರ್ನಿಕಸನ ಹೆಸರು ಅಮರ ಮತ್ತು ಚಿರಸ್ಮರಣೀಯ'

ಗೆಲಿಲಿಯೋ: ಹೇಗೆ ತನ್ನ ಸ್ವಸಾಮರ್ಥ್ಯದಿಂದ ಹೊಸ ಹೊಸ ಪ್ರಯೋಗಗಳನ್ನು ಮಾಡಿದನು ಮತ್ತು ಅಲ್ಲಿಯವರೆಗೆ ಪ್ರಚಾರದಲ್ಲಿದ್ದ ಅರಿಸ್ಟಾಟಲ್ ಶೋಧನೆಗಳಲ್ಲಿಯ ತಪ್ಪುಗಳನ್ನು ಬೆಳಕಿಗೆ ಹೇಗೆ ತಂದನು ಇತ್ಯಾದಿಗಳನ್ನು ತಿಳಿಸಿದ ಮೇಲೆ ಗೆಲಲಿಯೋ ದೂರದರ್ಶಕವನ್ನು ತಯಾರಿಸಿದ ಬಗೆಯನ್ನು ಹೇಳಲಾಗಿದೆ. ಗೆಲಿಲಿಯೋನ ಸಂಶೋಧನೆಗಳಿಂದ ಇದುವರೆಗೆ ಪ್ರಚಾರದಲ್ಲಿದ ಬೈಬಲ್ ಆಧಾರಿತ ಮೂಢನಂಬಿಕೆಗೆ ಧಕ್ಕೆಯುಂಟಾಗಿದ್ದರಿಂದ ಕ್ರಿಶ್ಚಿಯನ್ ಸಮುದಾಯ ರೊಚ್ಚಿಗೆದ್ದು ಅವನಿಗೆ ಹೇಗೆ ಶಿಕ್ಷೆ ವಿಧಿಸಿತೆಂಬುದನ್ನು ಹೀಗೆ ದಾಖಲಿಸಲಾಗಿದೆ:

'೧೬೩೨ರಲ್ಲಿ ಗೆಲಿಲಿಯೋನನ್ನು ರೋಮಿಗೆ ಕರೆಸಿ ಅವನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಕಡೆಯಲ್ಲಿ ಗೆಲಿಲಿಯೋ ಪೋಪನೆದುರು ಮಂಡಿಯೂರಿ ತನ್ನ ತಪ್ಪನ್ನು ಒಪ್ಪಿಕೊಳ್ಳುವಂತೆ ಬಲಾತ್ಕಾರ ಪಡಿಸಲಾಯಿತು. ಗೆಲಿಲಿಯೋ ಇದೇ ರೀತಿ ತಪ್ಪೊಪ್ಪಿಗೆ ಸಲ್ಲಿಸಿದನು

ತನ್ನ ಮುಪ್ಪಿನ ವಯಸ್ಸಿನಲ್ಲಿ ಎರಡೂ ಕಣ್ಣುಗಳನ್ನು ಕಳೆದುಕೊಂಡು ೧೬೪೩ರಲ್ಲಿ ಅಸು ನೀಗಿದನು.

ಬರ್ಟ್ರಾಂಡ್ ರಸೆಲ್: ದೊಡ್ಡ ಗಣಿತ ಶಾಸ್ತ್ರಜ್ಞನಾಗಿರುವುದರ ಜೊತೆಗೆ ದೊಡ್ಡ ಮಾನವತಾವಾದಿ, ವಿಶ್ವಶಾಂತಿ ಪ್ರಿಯ, ಪ್ರಜಾ ಸ್ವಾತಂತ್ರ್ಯ ರಕ್ಷಕ, ಪ್ರಗತಿಪರ ರಾಜಕಾರಣಿ, ಮುಕ್ತ ಶಿಕ್ಷಣ ಪ್ರತಿಪಾದಕ, ಅಣುಬಾಂಬು ವಿರೋಧಿ, ವಿವೇಚನಾಧಾರಿತ ಲೈಂಗಿಕ ಸಂಬಂಧಗಳ ಪ್ರತಿಪಾದಕ ಇತ್ಯಾದಿ ಹಲವಾರು ವೈಚಾರಿಕ ಮುಖಗಳ ವ್ಯಕ್ತಿತ್ವವನ್ನು ಹೊಂದಿದ್ದರೆಂಬುದನ್ನು ಲೇಖಕರು ಸವಿಸ್ತಾರವಾಗಿ ತಿಳಿಸಿದ್ದಾರೆ. ರಸೆಲ್‌ರ ಮುಖ್ಯ ಸ್ವಭಾವವೊಂದು ಈ ರೀತಿ ಇದೆ:- ಕೆಲವು ವರ್ಷಗಳಿಗೊಮ್ಮೆ ರಸೆಲ್ ಹೊಸ ಸಿದ್ಧಾಂತಗಳನ್ನು ಪ್ರತಿಪಾದಿಸುವುದನ್ನು ಕಾಣುತ್ತೇವೆ. ಅದೇ ರೀತಿ ಹಳೆಯ ಸಿದ್ಧಾಂತಗಳನ್ನು ಕೈ ಬಿಡುತ್ತಿದ್ದರು. ಇದಕ್ಕೆ ಕಾರಣ ಅವರ ಪರಿಶುದ್ಧ ಬೌದ್ಧಿಕ ಪ್ರಾಮಾಣಿಕತೆ. ತಮ್ಮ ಸಿದ್ಧಾಂತ ತಪ್ಪೆಂದು ಖಚಿತವಾದ ಕೂಡಲೇ ಯಾವ ವಿಧವಾದ ಸಂಕೋಚವೂ ಇಲ್ಲದೆ ತಪ್ಪನ್ನು ಒಪ್ಪಿಕೊಂಡು ಅದನ್ನು ಕೈ ಬಿಡುತ್ತಿದ್ದರು. ಅದೇ ರೀತಿ ಹೊಸ ಸಿದ್ಧಾಂತ ಸರಿಯೆಂದು ಖಚಿತವಾದ ಕೂಡಲೆ ಅದನ್ನು ಸಂಪೂರ್ಣವಾಗಿ ಅನುಮೋದಿಸುತ್ತಿದ್ದರು.

ಇಷ್ಟೇ ಅಲ್ಲ ರಸೆಲ್‌ರಲ್ಲಿ ಇದ್ದ ಇನ್ನೊಂದು ವಿಶಿಷ್ಟ ಗುಣ ಈ ರೀತಿ ಇತ್ತು. ಬಹುತೇಕ ಬುದ್ಧಿಜೀವಿಗಳು ಸಮಾಜದ ಆಗು ಹೋಗುಗಳ ಕಡೆಗೆ ಗಮನ ಕೊಡದೆ ಸಮಾಜದಿಂದ ದೂರ ನಿಂತು ತಮ್ಮ ಆಲೋಚನೆಗಳಲ್ಲೇ ಮಗ್ನರಾಗಿರುವುದು ಸಾಮಾನ್ಯ. ಆದರೆ ರಸೆಲ್ ಸಮಾಜ ಮತ್ತು ವ್ಯಕ್ತಿಗಳು ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಆಲೋಚಿಸಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು ಹಾಗೂ ತಮ್ಮ ಅಭಿಪ್ರಾಯಗಳನ್ನು ಕಾರ್ಯಗತಗೊಳಿಸಲು ವೈಯಕ್ತಿಕವಾಗಿ ಶ್ರಮಿಸುತ್ತಿದ್ದರು.

ಶಿಕ್ಷಣ ಬಗ್ಗೆ ಇದ್ದ ರಸೆಲರ ಅಭಿಪ್ರಾಯಗಳು ಇಂದೂ ಪ್ರಸ್ತುತವೆನಿಸುತ್ತವೆ. ವಿದ್ಯಾರ್ಥಿ ಪ್ರೌಢನಾದ ಮೇಲೆ ಪ್ರಜಾ ಸತ್ತಾತ್ಮಕ ಸಮಾಜದಲ್ಲಿ ಜವಾಬ್ದಾರಿಯಿಂದ ವರ್ತಿಸುವ ಸ್ವತಂತ್ರ ವ್ಯಕ್ತಿಯಾಗಿ ಬಾಳಲು ಅವಶ್ಯವಾದ ಮನೋಭಾವದ ಬೆಳವಣಿಗೆಯ ದೃಷ್ಟಿಯಿಂದ ವಿದ್ಯಾಭ್ಯಾಸ ಮಾಡಿ ತನ್ನ ನಡತೆ ಮತ್ತು ಬುದ್ಧಿ ಶಕ್ತಿಗಳನ್ನು ಅಭಿವೃದ್ಧಿಗೊಳಿಸಿಕೊಂಡು ಸುಸಂಸ್ಕೃತ ವ್ಯಕ್ತಿಯಾಗಿ ವಿಕಾಸಗೊಳ್ಳಲು ಸಹಕಾರಿಯಾಗಿರಬೇಕು.

ರಸೆಲ್‌ರ ಜೀವನ ದರ್ಶನ ಇಂದಿನ ಯುವಕರಿಗೆ ಆದರ್ಶಯುತವಾಗಿದೆ. ಆ ಕುರಿತು ರಸೆಲ್ ಈ ರೀತಿ ಹೇಳಿದ್ದಾರೆ. 'ಜೀವನದಲ್ಲಿ ಉದಾತ್ತತೆ, ಸೌಂದರ್ಯ ಮತ್ತು ದಯಾಪರತೆ ಇವುಗಳಿಗಾಗಿ ಶ್ರಮಿಸುವುದು: ಸಾಮಾಜಿಕವಾಗಿ ದ್ವೇಷ, ಲೋಭ, ಈರ್ಷೆ ಇತ್ಯಾದಿ ತುಚ್ಛ ಮನೋವೃತ್ತಿಗಳಿಗೆ ಅವಕಾಶವಿಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಅನಿರ್ಬಂಧಿತವಾಗಿ ರೂಪಿಸಿಕೊಳ್ಳಲು ಸಾಧ್ಯವಾದ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುವುದು ಜೀವನದ ಪರಮೋದ್ದೇಶವಾಗಬೇಕು.

ಇಂಥ ಉದಾತ್ತ ವಿಚಾರಗಳನ್ನು ಹೊಂದಿದ್ದ ವ್ಯಕ್ತಿ ಎರಡು - ಮೂರು ಸಲ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತರೆಂಬುದು ಮನುಷ್ಯನ ವಿಚಿತ್ರ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

ಪ್ರೇಮವೆಂದರೆ ಪಡೆಯುವುದಲ್ಲ ಕೊಡುವುದು.

ರಸೆಲ್ ಮಹಾತ್ಮಾ ಗಾಂಧೀಯವರ ಅಸಹಕಾರ ಮತ್ತು ಸತ್ಯಾಗ್ರಹದಂಥ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮ ೯೦ನೇ ವಯಸ್ಸಿನಲ್ಲಿ ಅಣು ಅಸ್ತ್ರಗಳ ವಿರುದ್ಧ ಹೋರಾಟ ನಡೆಸಿ ಒಂದು ವಾರ ಜೈಲು ವಾಸ ಅನುಭವಿಸಬೇಕಾಯಿತು.

ಇಂಥ ಅನೇಕ ಮಹತ್ವದ ವಿಷಯಗಳನ್ನು ಲೇಖಕರು ಓದುಗರಿಗೆ ಪರಿಚಯಿಸುತ್ತಾರೆ.

ಆರ್ನೆಸ್ಟ್ ರುದರ್ಫೋರ್ಡ್: ರಸಾಯನ ಮತ್ತು ಭೌತವಿಜ್ಞಾನಿ, ಪರಮಾಣು ಒಂದು ಅವಿಭಾಜ್ಯ ಮತ್ತು ರಚನಾ ಹರಿತ ಕಣ ಎಂಬ ನಂಬಿಕೆಯನ್ನು ಸಡಿಲಿಸಿ ಪರಮಾಣುವಿಗೆ ಒಳ ರಚನೆಯೊಂದಿದೆ ಎಂದು ತೋರಿಸಿಕೊಟ್ಟರು ರುದರ್ಫೋರ್ಡ್. ಅಲ್ಲದೆ ೧೫-೨೦ ವರ್ಷಗಳ ಕಾಲ ವಿಕಿರಣ ಕ್ರಿಯೆಯ ಬಗ್ಗೆ ಅನೇಕ ಪ್ರಯೋಗಗಳನ್ನು ಕೈಗೊಂಡು ಇದನ್ನೇ ತಮ್ಮ ಏಕಮಾತ್ರ ಸಂಶೋಧನಾ ಕ್ಷೇತ್ರವನ್ನಾಗಿ ಮಾಡಿಕೊಂಡರು. ವಿಕಿರಣ ಕ್ರಿಯಾತ್ಮಕ ಪದಾರ್ಥಗಳಿಂದ ಹೊರಬರುವ ವಿಕಿರಣವು a. B ಮತ್ತು y ಎಂಬ ಬೇರೆ ಬೇರೆ ಜಾತಿಯ ಕಿರಣಗಳಿಂದ ಕೂಡಿದ ಸಂಕೀರ್ಣ ವಿಕಿರಣ ಎಂದು ರುದರ್ಫೋರ್ಡ್ ತೋರಿಸಿದರು. ತೀವ್ರಗತಿಯಲ್ಲಿ ಮುಂದುವರಿಯುತ್ತಿದ್ದ ಸಂಶೋಧನೆಗಳ ಫಲವಾಗಿ ರುದರ್ಫೋರ್ಡ್ ಕೀರ್ತಿ ದಿನೇ ದಿನೇ ಹೆಚ್ಚುತ್ತಿತ್ತು. ೧೯೦೮ರ ಅಂತ್ಯದಲ್ಲಿ ಅವರಿಗೆ ನೋಬೆಲ್ ಪಾರಿತೋಷಕ ದೊರೆಯಿತು.

ರುದರ್ಫೋರ್ಡ್ ಇನ್ನೊಂದು ಮಹತ್ವದ ಸಂಶೋಧನೆ ನಮ್ಮ ಭೂಮಿಯ ಆಯಸ್ಸಿಗೆ ಸಂಬಂಧಿಸಿದ್ದು. ಲಾರ್ಡ್ ಕೆಲ್ವಿನ್ ಎಂಬ ವಿಜ್ಞಾನಿ ಕೆಲವು ವೈಜ್ಞಾನಿಕ ಆಧಾರದ ಮೇಲೆ ಭೂಮಿಯ ವಯಸ್ಸು ೪೦ ದಶಲಕ್ಷ ವರ್ಷಗಳನ್ನು ಮೀರಿರಲಾರದೆಂದು ಅಂದಾಜು ಮಾಡಿದ್ದರು. ಭೂ ಶಾಸ್ತ್ರಜ್ಞರ ಪ್ರಕಾರ ಭೂಮಿಯ ವಯಸ್ಸು ಮೇಲಿನ ಮಿತಿಯ ನೂರ್ಮಡಿಗೂ ಹೆಚ್ಚು ಇರಬೇಕು. ಪರಸ್ಪರ ವಿರುದ್ಧ ಅಂದಾಜುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ನಿಷ್ಕರ್ಷಿಸಬೇಕಾಯಿತು. ಈ ಸಮಸ್ಯೆಯ ಬಗ್ಗೆ ರುದರ್ಫೋರ್ಡ್ ತಮ್ಮ ಹೊಸ ಸಿದ್ಧಾಂತವನ್ನು ಸೂಚಿಸಿದರು. ರಾಯಲ್ ಸಂಸ್ಥೆಯ ಆಶ್ರಯದಲ್ಲಿ ಮಾಡಿದ ಭಾಷಣದಲ್ಲಿ ಹೊಸ ವಿಧಾನವನ್ನು ವಿವರಿಸಿದರು. ಭೂಮಿಯ ಪದರದಲ್ಲಿರುವ ಕೆಲವು ವಿಕರಣಾತ್ಮಕ ಅದುರುಗಳ ವಿಕಿರಣ ಕ್ರಿಯೆಯ ಮುಖ್ಯ ಮತ್ತು ಅವುಗಳಲ್ಲಿ ಇನ್ನೂ ಉಳಿದಿರುವ ವಿಕರಣಾತ್ಮಕ ಮೂಲ ಪದಾರ್ಥದ, ಅದರಲ್ಲೂ ಮುಖ್ಯವಾಗಿ ರೇಡಿಯಂ ಮತ್ತು ವಿಕಿರಣ ಪರಂಪರೆಯ ಅಂತಿಮ ಜನ್ಯ ಪದಾರ್ಥವಾದ ಸೀಸದ ಪರಸ್ಪರ ಪ್ರಮಾಣ ಇವುಗಳ ಆಧಾರದ ಮೇಲೆ ಭೂಮಿಯ ವಯಸ್ಸನ್ನು ನಿರ್ಧರಿಸಬಹುದೆಂದು ಸಮಂಜಸವಾಗಿ ವಾದಿಸಿ ಈ ಪ್ರಕಾರ ಭೂಮಿಯ ಆಯಸ್ಸು ೪೦ ದಶಲಕ್ಷ ವರ್ಷಗಳಿಗೂ ಬಹಳ ಹೆಚ್ಚಾಗಿರಬೇಕೆಂದು ತೋರಿಸಿಕೊಟ್ಟರು.

೧೯೩೭ರಲ್ಲಿ ಭಾರತೀಯ ವಿಜ್ಞಾನ ಪರಿಷತ್ತಿನ ವಾರ್ಷಿಕ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಭಾರತೀಯ ವಿಜ್ಞಾನಿಗಳು ರುದರ್ಫೋರ್ಡ್‌ರವರನ್ನು ಆಹ್ವಾನಿಸಿದ್ದರು. ಸಮ್ಮೇಳನ ೧೯೩೮ ಜನವರಿ ತಿಂಗಳು ಜರಗುವ ಏರ್ಪಾಡಾಗಿತ್ತು. ರುದರ್ಫೋರ್ಡ್‌ರವರು ಆಹ್ವಾನವನ್ನು ಸಂತೋಷದಿಂದ ಒಪ್ಪಿಕೊಂಡು ಪ್ರಯಾಣಕ್ಕೆ ಸಿದ್ಧರಾದರು. ಆದರೆ ವಿಧಿ ಬೇರೊಂದು ರೀತಿ ಯೋಚಿಸಿತು. ೧೯೩೭ ಅಕ್ಟೋಬರ್ ೧೯ ರಂದು ಅನಿರೀಕ್ಷಿತವಾಗಿ ರುದರ್ಫೋರ್ಡ್ ವಿಧಿವಶರಾದರು. ಆಗ ಅವರಿಗೆ ೬೬ ವರ್ಷ.

ಆಲ್ಬರ್ಟ್ ಐನ್‌ಸ್ಟೈನ್: ಸಾಪೇಕ್ಷವಾಗಿ ಸಿದ್ಧಾಂತದ ರೂವಾರಿ. ಈ ಹೊಸ ಸಿದ್ಧಾಂತವು ಅದುವರೆಗೆ ಇದ್ದ ಭೌತಶಾಸ್ತ್ರದ ಮೂಲಭೂತ ತತ್ವ ಮತ್ತು ಕಲ್ಪನೆಗಳನ್ನು ಆಮೂಲಾಗ್ರವಾಗಿ ಮಾರ್ಪಡಿಸಿತು. ಇವರ ಅನೇಕ ಪ್ರಕಾರದ ಪ್ರತಿಭೆಗಲನ್ನು ಗಮನಿಸಿ ಇವರನ್ನು ಇಪ್ಪತ್ತನೆಯ ಶತಮಾನದ ನ್ಯೂಟನ್ ಎಂದು ಕರೆದಿದ್ದಾರೆ. ಐನ್‌ಸ್ಟಿನ್‌ನ ಹಲವಾರು ಭೌತ ಶೋಧನೆಗಳ ಕಾರಣದಿಂದಾಗಿ ಅವರಿಗೆ ೧೯೨೧ರಲ್ಲಿ ನೋಬೆಲ್ ಪಾರಿತೋಷಕ ಬಂದಿತು.

ಐನ್‌ಸ್ಟೈನ್ ಪ್ಯಾಲೆಸ್ಟೈನ್‌ಗೆ ಭೇಟಿಕೊಟ್ಟರು. ಅಲ್ಲಿ ಯಹೂದಿಗಳ ರಾಷ್ಟ್ರವನ್ನು ಸ್ಥಾಪಿಸಬೇಕೆಂದು ಸಲಹೆ ಕೊಟ್ಟರು. ಆ ರಾಷ್ಟ್ರದಲ್ಲಿ ಯಹೂದಿಗಳು ಮತ್ತು ಅರಬ್‌ರು ಕೂಡಿ ಬಾಳಬೇಕೆಂದೂ ಹೇಳಿದರು.

ಜರ್ಮನಿಯಲ್ಲಿ ನಾಝಿಗಳ ದೌರ್ಜನ್ಯ ಮತ್ತು ಅತ್ಯಾಚಾರ ಹೆಚ್ಚಾದುದರಿಂದ ಐನ್‌ಸ್ಟೈನ್ ಅಮೆರಿಕಾಕ್ಕೆ ವಲಸೆ ಬಂದರು. ಮತ್ತು ಅಲ್ಲಿ ತಮ್ಮ ಸಂಶೋಧನಾ ಕಾರ್ಯವನ್ನು ಮುಂದುವರೆಸಿದರು ಅಮೆರಿಕೆಯ ಪ್ರಜೆಯೂ ಆದರು.

೧೯೩೯ರಲ್ಲಿ ಎರಡನೇ ವಿಶ್ವ ಸಮರ ಪ್ರಾರಂಭವಾಯಿತು. ಈ ಯುದ್ಧದಲ್ಲಿ ನಾಝಿ ಮತ್ತು ಫಾಸಿಸ್ಟ್ ಶಕ್ತಿಗಳ ಕೈ ಮೇಲಾಗುತ್ತಿರುವುದನ್ನು ಗಮನಿಸಿದ ಐನ್‌ಸ್ಟೈನ್ ಮತ್ತು ಇತರ ವಿಜ್ಞಾನಿಗಳು 'ಕಾಲ ಮಿಂಚುವ' ಮೊದಲೇ ಅಮೆರಿಕಾ ಅಣುಬಾಂಬ್ ತಯಾರಿಸಿ ಮುನ್ನಡೆಯುತ್ತಿರುವ 'ರಾಕ್ಷಸೀ' ಶಕ್ತಿಯನ್ನು ತಡೆಯಬೇಕೆಂದು ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್‌ರಿಗೆ ಪತ್ರ ಬರೆಯಲು ತೀರ್ಮಾನಿಸಿದರು. ಆ ಮೇರೆಗೆ ಅಮೆರಿಕಾ ಅಣುಬಾಂಬ್ ತಯಾರಿಸಿ ಜಪಾನಿನ ಹೀರೋಶಿಮಾ ಮತ್ತು ನಾಗಾಸಾಕಿಗಳ ಮೇಲೆ ಅಣುಬಾಂಬ್ ಹಾಕಿತು. ನಾಝಿಗಳು ಮತ್ತು ಫಾಸಿಸ್ಟರು ಸೋಲನ್ನು ಒಪ್ಪಿದ್ದರು. ಅಣುಬಾಂಬ್ ಉಪಯೋಗಿಸಲು ಸಲಹೆ ಕೊಟ್ಟಿದ್ದ ಐನ್‌ಸ್ಟೈನ್ ವಿರುದ್ಧ ಅನೇಕ ಟೀಕೆಗಳು ಬಂದವು. ಈ ಟೀಕೆಗಳಿಗೆ ಉತ್ತರವಾಗಿ ಐನ್‌ಸ್ಟೈನ್ ಹೀಗೆ ಹೇಳಿದರು "ಬಾಂಬಿನ ಮಾರಕ ಶಕ್ತಿಯ ಪೂರ್ಣ ಅರಿವು ನನಗೆ ಇತ್ತು. ಆದರೆ ಅಂದು ಜರ್ಮನಿಯಲ್ಲಿಯೂ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯುತ್ತಿದ್ದ ಕಾರಣ ಅಮೆರಿಕಾ ಸರ್ಕಾರ ತ್ವರಿತವಾಗಿ ಈ ದಿಕ್ಕಿನಲ್ಲಿ ಕಾರ್ಯಗಳನ್ನು ಕೈಗೊಂಡು ಜರ್ಮನಿಗಿಂತ ಮುಂಚೆ ಯಶಸ್ವಿಯಾಗುವುದು ಪ್ರಪಂಚದ ಹಿತ ದೃಷ್ಟಿಯಿಂದ ಅತ್ಯಗತ್ಯ ಎಂಬುದು ನನ್ನ ಭಾವನೆಯಾಗಿತ್ತು. ಶಾಂತಿ ಸ್ಥಾಪನೆ ಮತ್ತು ಶಾಂತಿ ಪರಿಪಾಲನೆಯಲ್ಲಿ ನನಗೆ ಅಚಲವಾದ ನಂಬಿಕೆಯಿದೆ. ಆದರೆ ಜೀವನವನ್ನೇ ಹಾಳು ಮಾಡುವ ದುರುದ್ದೇಶವುಳ್ಳ ರಾಕ್ಷಸೀ ಶಕ್ತಿಗಳನ್ನು ಎದುರಿಸುವಾಗ ಎಲ್ಲ ವಿಧವಾದ ಅಸ್ತ್ರಗಳನ್ನು ಬಳಸುವುದು ಅನಿವಾರ್ಯ'

ಐನ್‌ಸ್ಟೈನ್ ಎಲ್ಲ ವಿಧವಾದ ಮೂಲ ಘಟನೆಗಳನ್ನು ವಿವರಿಸಬಹುದಾದ ಏಕೈಕ ಸಮಗ್ರ ಸಿದ್ಧಾಂತವನ್ನು ನಿರ್ಮಿಸುವುದು ಅಗತ್ಯ ಮತ್ತು ಸಾಧ್ಯ ಎಂದು ನಂಬಿದ್ದರು.

ನಮ್ಮ ಜೀವನದಲ್ಲಿ ದೈವತ್ವದ ಕಲ್ಪನೆಯ ಪಾತ್ರವೇನು ಎಂಬ ಪ್ರಶ್ನೆಗೆ ಉತ್ತರವಾಗಿ ಐನ್‌ಸ್ಟೈನ್ ಈ ರೀತಿ ಹೇಳಿದ್ದಾರೆ 'ನನ್ನ ಪ್ರಕಾರ ಆಸ್ತಿ ಕತೆ ಅಥವಾ ದೈವತ್ವ ಭಾವನೆಯ ಪ್ರಮುಖ ಪಾತ್ರವೆಂದರೆ ನಮ್ಮ ಜೀವನದ ಮೂಲಭೂತ ಉದ್ದೇಶಗಳು ಹಾಗೂ ಮೌಲ್ಯಗಳು ಯಾವುವು ಎಂಬುದನ್ನು ಸ್ಪಷ್ಟಪಡಿಸಿ ಅವು ನಮ್ಮ ಭಾವನಾತ್ಮಕ ಜೀವನದಲ್ಲಿ ಸ್ಥಿರವಾಗಿ

ರೂಢಸ್ಥವಾಗುವಂತೆ ಮಾಡುವುದು ಮತ್ತು ನಮ್ಮನ್ನು ಸ್ವಾರ್ಥ ಪರತೆಯಿಂದ ಮುಕ್ತಗೊಳಿಸುವುದು' ಅವರ ಇನ್ನೊಂದು ಮಾತು ಹೀಗಿದೆ

ಮತಧರ್ಮ ಇಲ್ಲದ ವಿಜ್ಞಾನ ಕುಂಟು
ವಿಜ್ಞಾನ ಇಲ್ಲದ ಮತಧರ್ಮ ಕುರುಡು

ಡಾ. ಸಿ.ವಿ. ರಾಮನ್: ಇಂಗ್ಲೆಂಡಿಗೆ ಹಡಗಿನಲ್ಲಿ ಪ್ರಯಾಣ ಮಾಡುವಾಗ ಮಾರ್ಗದಲ್ಲಿ ಭೂಮಧ್ಯ ಸಮುದ್ರವನ್ನು ಹಾದು ಹೋಗುವಾಗ ಅವರಿಗೊಂದು ಹೊಸ ರೀತಿಯ ಅನುಭವವವಾಯಿತು. ಸಮುದ್ರವನ್ನು ದಾಟುತ್ತಿದ್ದಾಗ ಹಗಲಿನಲ್ಲಿ ಅದು ನೀಲಿ ಬಣ್ಣದಿಂದ ಹೊಳೆಯುತ್ತಿದ್ದನ್ನು ಕಂಡು ಬೆರಗಾದರು. ಈ ವಿಸ್ಮಯಕಾರಿ ಅನುಭವ ಅವರನ್ನು ಆಲೋಚನೆಗೆ ಈಡು ಮಾಡಿತು. ಸಮುದ್ರದ ನೀಲಿ ಬಣ್ಣಕ್ಕೆ ಸಂಬಂಧಿಸಿದಂತೆ ಅಂದು ಪ್ರಚಲಿತವಾಗಿದ್ದ ರ್‍ಯಾಲೆಯವರ ಪ್ರತಿಫಲನ ಆಧಾರಿತ ವಿವರಣೆ ರಾಮನ್‌ರವರಿಗೆ ಸರಿ ಕಂಡು ಬರಲಿಲ್ಲ. ಪ್ರತಿಯಾಗಿ ನೀರಿನ ಅಣುಗಳು ಸೂರ್ಯನ ಬೆಳಕನ್ನು ಚದುರಿಸಿ ಈ ಪರಿಣಾಮವನ್ನುಂಟು ಮಾಡುವುದು ಅಸಂಭವವೇನೂ ಅಲ್ಲ ಎಂದು ಅವರಿಗೆ ಅನಿಸಿತು. ಸಮುದ್ರದ ನೀಲಿ ಬಣ್ಣಕ್ಕೆ ಸಂಬಂಧಿಸಿದ ಅವರ ಅನುಭವ ಆಲೋಚನೆಗಳೆ ಅವರ ಮುಂದಿನ ಸಂಶೋಧನೆಗಳಿಗೆ ಸ್ಫೂರ್ತಿದಾಯಕವಾಗಿ ಅಣುಗಳಿಂದ ಉಂಟಾಗುವ ಬೆಳಕಿನ ಚದುರುವಿಕೆಗೆ ಸಂಬಂಧಿಸಿದಂತೆ ತಮ್ಮ ಸಹ ಸಂಶೋಧಕರೂಂದಿಗೆ ತೀವ್ರಗತಿಯಲ್ಲಿ ವ್ಯಾಪಕ ಸಂಶೋಧನೆಗಳನ್ನು ಕೈಗೊಂಡರು. ಸಂಶೋಧನೆಗಳು ಖಚಿತ ಹಾಗೂ ನಿರ್ಣಾಯಕ ಮಟ್ಟವನ್ನು ತಲುಪಿ 'ರಾಮನ್ ಪರಿಣಾಮ' ಆವಿಷ್ಕಾರಗೊಳ್ಳಲು ನಾಲ್ಕಾರು ವರ್ಷಗಳೇ ಬೇಕಾಯಿತು. ೧೯೩೦ರಲ್ಲಿ ರಾಮನ್ ಅವರಿಗೆ ನೋಬೆಲ್ ಪಾರಿತೋಷಕ ದೊರೆಯಿತು. ೧೯೫೪ರಲ್ಲಿ ಭಾರತ ಸರ್ಕಾರ ಭಾರತ ರತ್ನ ಪ್ರಶಸ್ತಿಯನ್ನು ಕೊಟ್ಟು ರಾಮನ್‌ರವರನ್ನು ಗೌರವಿಸಿತು. ೧೯೩೪ರಲ್ಲಿ ರಾಮನ್ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದರು. ಮೈಸೂರು ಸರ್ಕಾರ ಅವರಿಗೆ ರಾಜಸಭಾ ಭೂಷಣ ಎಂಬ ಪುರಸ್ಕಾರ ನೀಡಿ ಗೌರವಿಸಿತು.

೧೯೪೮ರಲ್ಲಿ ತಮ್ಮದೇ ಆದ ರಾಮನ್ ಇನ್‌ಸ್ಟಿಟ್ಯೂಟ್ ಎಂಬ ಪ್ರಯೋಗ ಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಈ ಕೇಂದ್ರದಲ್ಲಿ ನಮ್ಮ ದೇಶದ ತೀಕ್ಷ್ಣ ಮತಿಗಳು ವಿಶ್ವದ ರಹಸ್ಯವನ್ನು ಶೋಧಿಸಬೇಕು ಎಂದುರಾಮನ್ ಬಯಸಿದ್ದರು.

ತಮ್ಮ ಜೀವನಕ್ಕೆ ಸಂಬಂಧಿಸಿದಂತೆ ಅವರು ಹೇಳಿದ ಕೆಲವು ಮಾತುಗಳು ಈ ರೀತಿ ಇವೆ: ನಾವು ಯಾವಾಗ ಅಂದರೆ ಆವಾಗ ನಾನು ತಿನ್ನುವುದಿಲ್ಲ. ಆಹಾರದ ವಿಷಯದಲ್ಲಾಗಲೀ, ವಿಶ್ರಾಂತಿ ವಿಷಯದಲ್ಲಾಗಲಿ ನನ್ನ ಅವಶ್ಯಕತೆ ಮಿತವಾದದ್ದು. ಆಹಾರದ ವಿಷಯದಲ್ಲಿ ಬಹಳ ಸಂಯಮ ಅವಶ್ಯಕ. ಅವುಗಳ ಪರಿಪಾಲನೆಯೇ ನನ್ನ ಜೀವನದ ಗುಟ್ಟು. ವಿರಾಮ (ಸೋಮಾರಿತನ) ನಮ್ಮನ್ನು ಕೊಲ್ಲುತ್ತಿರುವ ಮಹಾವ್ಯಾಧಿ. ಖಗೋಳ ವಿಜ್ಞಾನ ಹಾಗೂ ಭೌತ ವಿಜ್ಞಾನ ಕ್ಷೇತ್ರಗಳಲ್ಲಿ ಹೊರ ಬೀಳುತ್ತಿರುವ ಆವಿಷ್ಕಾರಗಳು ದೈವತ್ವದ ಪುನರಪಿ ಅಭಿವ್ಯಕ್ತಿ ಎನ್ನಬಹುದು.

■

ನಿಮ್ಮ ಯಶಸ್ಸುಗಳಿಂದ ಕಲಿಯುವಷ್ಟನ್ನೇ ನಿಮ್ಮ ವಿಫಲತೆಗಳಿಂದಲೂ ಕಲಿಯಬಹುದು.

ಸ್ವಾತಂತ್ರ್ಯೋತ್ತರದ ನೆಹರು ಕಥೆ

- ಶಶಿ ಥರೂರ್

(ಈ ತಿಂಗಳಲ್ಲಿ ಪೆಂಗ್ವಿನ್ ವೈಕಿಂಗ್ ಪ್ರಕಟಣಾಲಯ ಪ್ರಕಟಿಸಲಿರುವ ಭಾರತದ ಶೋಧನೆ: ನೆಹರು ಎಂಬ ಪುಸ್ತಕದ ಆಯ್ದ ಭಾಗ)



ಸ್ವತಂತ್ರ ಬಂದ ನಂತರದ ಕೆಲವು ತಿಂಗಳುಗಳು ನೆಮ್ಮದಿಯ ತಿಂಗಳುಗಳಾಗಿರಲಿಲ್ಲ. ಸ್ವಭಾವತಃ ಭಾವುಕ ಜೀವಿಯಾದ ಜವಾಹರಲಾಲ್ ಆ ತಿಂಗಳುಗಳಲ್ಲಿ ಮನುಷ್ಯನೆ ಕೇಂದ್ರ ಬಿಂದುವಾಗಿದ್ದಂಥ ನಾಟಕದಲ್ಲಿ ಪ್ರಧಾನ ಪಾತ್ರವಹಿಸಿದ್ದರು, ಹಿಂದು ಮುಸ್ಲಿಂ ಗಲಬೆಗೆ ತುತ್ತಾದ ವ್ಯಕ್ತಿಯನ್ನು ನೋಡಿ ಜವಾಹರ ಅಳುತ್ತಿದ್ದುದು ಸಾಮಾನ್ಯವಾಗಿತ್ತು; ಮುಸಲ್ಮಾನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದ ಹಿಂದುವನ್ನು ಗುಂಡಿಕ್ಕಿ ಸಾಯಿಸುವಂತೆ ತನ್ನ ಅಂಗರಕ್ಷಕರಿಗೆ ಆದೇಶ ಕೊಡುತ್ತ ಧಾವಿಸುತ್ತಿದ್ದುದು ಸಹ ಸಾಮಾನ್ಯ ದೃಶ್ಯವಾಗಿತ್ತು. ಪ್ರಾಣಭಯದಿಂದ ತತ್ತರಿಸುತ್ತಿದ್ದ ಮುಸ್ಲಿಂಮರಿಗೆ ದಿಲ್ಲಿಯಲ್ಲಿಯ ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟಿದ್ದರು, ಎಲ್ಲವನ್ನೂ ಕಳೆದುಕೊಂಡಿದ್ದ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ದೊರಕಿಸಿಕೊಡಲೂ ನೆಹರು ಪ್ರಯತ್ನಿಸಿತ್ತಿದ್ದರು, ಈ ರೀತಿ ನೆಹರು ಎಡೆಬಿಡದೆ ಕೆಲಸದಲ್ಲಿ ತೊಡಗಿರುವುದನ್ನು ನೋಡಿದವರಿಗೆ ಅವರ ಆರೋಗ್ಯ ಕೆಡಬಹುದೆಂದು ಅನಿಸುತ್ತಿತ್ತು, ೧೯೪೮ರ ಜನವರಿ ತಿಂಗಳು, ಗಾಂಧಿ ಉಪವಾಸ ಮಾಡುತ್ತಿದ್ದರು. ಗಾಂಧಿಯವರನ್ನು ನೆಹರು ಭೇಟಿಮಾಡಿ ಹೊರಬರುತ್ತಿದ್ದಂತೆಯೇ ಒಂದು

ಗುಂಪು ನೆಹರೂರನ್ನು ಸುತ್ತುವರಿಯಿತು. ಆ ಗುಂಪಿನಲ್ಲಿದ್ದವರೆಲ್ಲರೂ "ಗಾಂಧಿ ಸಾಯಲಿ, ಗಾಂಧಿ ಸಾಯಲಿ" ಎಂದು ಕೂಗು ಹಾಕುತ್ತಿದ್ದರು, ಇದನ್ನು ಕೇಳಿ ನೆಹರು ತುಂಬ ಕೋಪಗೊಂಡರು. ತಮ್ಮ ಕಾರಿನಿಂದ ಧುಮಿಕಿದವರೆ ಆ ಗುಂಪಿನತ್ತ "ಹೀಗೆ ಹೇಳಲು ನಿಮಗೆಂಥ ಧೈರ್ಯ, ಬನ್ನಿ, ನನ್ನನ್ನು ಮೊದಲು ಕೊಲ್ಲಿ" ಎಂದು ಅರಚುತ್ತ ಆ ಗಂಪಿನ ಕಡೆಗೆ ಧಾವಿಸಿದರು, ಆಗ ಆ ಗುಂಪು ಅಲ್ಲಿಂದ ಚದುರಿತು.

ಹೊಸದಾಗಿ ಪ್ರಧಾನಿಯಾಗಿದ್ದ ನೆಹರು ಸರ್ಕಾರದಲ್ಲಿಯ ಇತರ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು, ಅವೂ ಸಹ ಅಷ್ಟೇ ಶ್ರಮದಾಯಕವಾಗಿದ್ದವು, ದೇಶವನ್ನೆಲ್ಲ ವ್ಯಾಪಿಸಿದ್ದ ಮಾನವ ಹತ್ಯಾಕಾಂಡವನ್ನು ಎದುರಿಸಬೇಕಾಗಿತ್ತು; ದೇಶೀಯ ಸಂಸ್ಥಾನಗಳನ್ನು ಭಾರತದೊಂದಿಗೆ ವಿಲೀನಗೊಳಿಸಬೇಕಾಗಿತ್ತು; ಪಾಕಿಸ್ತಾನದೊಂದಿಗೆ ಹಣಕಾಸಿನ ಹಂಚಿಕೆ, ಸೈನ್ಯದ ಹಂಚಿಕೆ ಇತ್ಯಾದಿ ಸಮಸ್ಯೆಗಳ ಜೊತೆಗೆ, ಬೃಹತ್ ಸಂಖ್ಯೆಯಲ್ಲಿ ಬರುತ್ತಿದ್ದ ನಿರಾಶ್ರಿತರ ಪುನರ್‌ವಸತಿ ಸಮಸ್ಯೆಯನ್ನು ಎದುರಿಸಬೇಕಾಗಿತ್ತು. ದಿಲ್ಲಿ ಮತ್ತು ಇತರ ನಗರಗಳಲ್ಲಿ ನಿರಾಶ್ರಿತರು ಮುತ್ತುತ್ತಿದ್ದರು. ಪರಸ್ಪರ ಕಾದಾಡುತ್ತಿದ್ದ ಗುಂಪುಗಳನ್ನು ಒಂದುಗೂಡಿಸುವ ಕೆಲಸವೂ ಮುಖ್ಯವಾಗಿ ಮುಂದೆ ಇತ್ತು, ಇದೆಲ್ಲದರ ಜೊತೆಗೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕಾರ್ಯಸೂಚಿಯನ್ನೂ ತಯಾರಿಸಬೇಕಾಗಿತ್ತು, ವಿದೇಶ ವ್ಯವಹಾರದ ವಿಷಯವೊಂದನ್ನು ಬಿಟ್ಟು ಇನ್ನು ಉಳಿದಂತೆ ಬೇರೆಲ್ಲ ವಿಷಯಗಳ ಬಗ್ಗೆ ನೆಹರು ಪಟೇಲರನ್ನು ಅವಲಂಬಿಸಿದ್ದರು ಪಟೇಲರು ತಮ್ಮ ಅಸಾಧಾರಣವಾದ ಕುಶಾಗ್ರ ಮತಿಯಿಂದ ಮತ್ತು ಆಡಳಿತಾತ್ಮಕ ಕುಶಲತೆಯಿಂದ, ಉಕ್ಕು ಸದೃಶವಾದ ಧೃತಿಯಿಂದ ಹೊಸ ಏಕೀಕೃತ ರಾಷ್ಟ್ರವನ್ನು ನಿರ್ಮಿಸಿದ್ದರು.

ಆಶ್ಚರ್ಯವನ್ನುಂಟುಮಾಡುವ ನೆಹರೂರ ಇನ್ನೂರ್ವ ಮಿತ್ರ ಹೊಸ ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್‌ಬಾಟನ್. ರಕ್ತದ ಮಡುವಿನಿಂದ ಭಾರತ ಸ್ವಾತಂತ್ರ್ಯ ಪಡೆಯುವಂತೆ ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತವೋ ಏನೋ ಎಂಬಂತೆ ಮೌಂಟ್‌ಬಾಟನ್ ಸ್ವಾತಂತ್ರ್ಯದ ನಂತರವೂ ಸುಮಾರು ಒಂದು ವರ್ಷ ನೆಹರೂರ ನೆರವಿಗೆ ನಿಂತರು.

ಇಂಗ್ಲೀಷ್ ಸರ್ಕಾರವು ಮುಸ್ಲಿಂ ಲೀಗ್ ಬಗ್ಗೆ ಸಹಾನುಭೂತಿ ಹೊಂದಿದ್ದರ ಪರಿಣಾಮವಾಗಿ ದೇಶ ವಿಭಜನೆಗೊಂಡಿತ್ತು. ಬ್ರಿಟೀಷ್ ಸಾಮ್ರಾಜ್ಯದ ಪತನದೊಂದಿಗೆ ತನ್ನದೇ ಆದ ದೇಶವನ್ನು ನಿರ್ಮಿಸಿಕೊಳ್ಳಲು ಲೀಗ್‌ಗೆ ಸಾದ್ಯವಾಗಿತ್ತು, ಮೌಂಟ್‌ಬಾಟನ್ನರು ಪಾಕಿಸ್ತಾನದ ನಾಯಕರೊಂದಿಗೆ ಉತ್ತಮವಾದ ಸಂಬಂಧವನ್ನು ಹೊಂದುವುದರ ಜೊತೆಗೆ ಅವರ ವಿಶ್ವಾಸವನ್ನು ಹೊಂದಿದ್ದರು, ಬಹುಶಃ ಈ ತೆರನಾದ ಸಂಬಂಧವನ್ನು ಪಾಕಿಸ್ತಾನದ ಮುಖಂಡರೊಂದಿಗೆ ಬೇರೆ ಯಾವ ಗವರ್ನರ್ ಜನರಲ್ ಹೊಂದಲು ಸಾಧ್ಯವಿರಲಿಲ್ಲ, ಮೌಂಟ್‌ಬಾಟನ್ ಹೊಂದಿದ್ದ ಈ ವಿಶೇಷ ಸೌಲಭ್ಯದಿಂದಾಗಿ ಅಂತ್ಯಂತ ಕಷ್ಟಕರವಾದ ದಿನಗಳಲ್ಲಿ ಅವರು ಭಾರತ ಮತ್ತು

ಪಾಕಿಸ್ತಾನಗಳ ಮಧ್ಯ ವಿಶ್ವಾಸರ್ಹವಾದ ಮತ್ತು ವ್ಯವಹಾರ ದೃಷ್ಟಿಯ ಮಧ್ಯವರ್ತಿಯಾಗಿ ಕೆಲಸಮಾಡಲು ಸಾಧ್ಯವಾಯಿತು, ಅಲ್ಲದೆ, ರಾಜಕಾರಣದ ಹೊರಗೆ ಇದ್ದ ಮೌಂಟ್‌ಬಾಟನ್ ದೇಶಿಯ ಸಂಸ್ಥಾನಿಕರು ಸಮಾಜವಾದಿ ನೆಹರೂರ ಬಗ್ಗೆ ಹೊಂದಿದ್ದ ಅಭಿಪ್ರಾಯಗಳನ್ನು ತೆಗೆದು ಹಾಕಿ ಅವರು ಭಾರತದೊಂದಿಗೆ ವಿಲೀನಗೊಳ್ಳದೆ ವಿಧಿಯಿಲ್ಲ ಎಂಬ ಮಾತನ್ನು ಸಂಸ್ಥಾನಿಕರಿಗೆ ಮನವರಿಕೆ ಮಾಡಿಕೊಡುವುದರಲ್ಲೂ ಸಫಲರಾದರು.

ಭಾರತ ಮತ್ತು ಪಾಕಿಸ್ತಾನದ ಮಧ್ಯ ಕಾಶ್ಮೀರ ವಿಷಯವಾಗಿ ಹೋರಾಟ ಪ್ರಾರಂಭವಾಯಿತು. ಆ ಸಮಯದಲ್ಲಿ ಎರಡೂ ದೇಶಗಳ ಮುಖ್ಯ ಸೇನಾಧಿಕಾರಿಯಾಗಿ ಬ್ರಿಟಿಷ್ ಅಧಿಕಾರಿಯೇ ಇದ್ದ. ಈ ಹೋರಾಟ ದೀರ್ಘ ಕಾಲ ನಡೆಯದಂತೆಯೂ ಮತ್ತು ಅದು ಕೊನೆಗೊಳ್ಳುವಂತೆಯೂ ಮೌಂಟ್ ಬಾಟನ್ ಮಾಡಿದರು, ಅವರು ಮತ್ತು ಅವರ ಪತ್ನಿ ಎಡ್ವಿನ್ ಇಬ್ಬರೂ ಆಗ ಇದ್ದ ನಿರಾಶ್ರಿತರ ಪುನರ್‌ವಸತಿ ಸಮಸ್ಯೆಹಾಗು ಅವರ ಪರಿಹಾರದಂಥ ಕ್ಲಿಷ್ಟಕರವಾದ ಕೆಲಸದಲ್ಲಿ ಆಸಕ್ತಿ ಹಾಗೂ ನಾಯಕತ್ವವಹಿಸಿ ಲಕ್ಷಾಂತರ ಜನ ನಿರಾಶ್ರಿತರ ಬದುಕಿಗೆ ನೆಮ್ಮದಿ ಮತ್ತು ಶಾಂತಿಯನ್ನು ತಂದುಕೊಟ್ಟರು.

೧೯೫೦ರಲ್ಲಿ ಭಾರತ ತನ್ನದೇ ಆದ ಸಂವಿಧಾನದ ಮೇರೆಗೆ ಗಣರಾಜ್ಯವಾಗಿ ಹೊರಹೊಮ್ಮಿದಾಗ ಭಾರತವು ಕಾಮನ್‌ವೆಲ್ತ್ ರಾಷ್ಟ್ರ ಸಮೂಹದಲ್ಲಿಯೇ ಇರುವಂತೆ ನೆಹರೂ ನೋಡಿನೋಡಿಕೊಂಡರು, ಇದರಿಂದಾಗಿ ಜಾಗತಿಕ ರಾಜಕೀಯ ಇತಿಹಾಸಕ್ಕೆ ಒಂದು ತಿರುವು ಸಿಕ್ಕಂತಾಯಿತು, ಬ್ರಿಟಿಷರ ಸಾಮ್ರಾಜ್ಯಶಾಹಿ ಸಂಬಂಧ ತಪ್ಪಿ ಅದರ ಬದಲಿಗೆ ಸ್ವತಂತ್ರವಾಗಿರುವ ರಾಷ್ಟ್ರಗಳ ಮಧ್ಯ ಸ್ವಇಚ್ಛಾ ಸಹಕಾರದ ಸಂಕೇತವಾಗಿ ಕಾಮನ್‌ವೆಲ್ತ ಗುರುತಿಸಲ್ಪಡುವಂತಾಯಿತು, ಈ ಪ್ರಕಾರದ ಸಂಬಂಧದ ಆಯ್ಕೆಯನ್ನು ಮಾಡುವುದರಲ್ಲಿ ಮೌಂಟ್‌ಬಾಟನ್ನರ ಪ್ರಭಾವ ವಿಶೇಷವಾಗಿತ್ತು, ಎಡ್ವಿನ್‌ರೊಂದಿಗೆ ಇದ್ದ ನೆಹರೂರವರ ಅತಿ ನಿಕಟ ಸಂಬಂಧ ಅವರಿಬ್ಬರ ಮರಣಾನಂತರ ಅನೇಕ ಊಹಪೋಹಕ್ಕೆ ಗ್ರಾಸವಾಯಿತು. ಆದರೆ ಮೌಂಟ್ ಬಾಟನ್‌ರೊಂದಿಗೆ ಇದ್ದ ನೆಹರೂರ ಮೈತ್ರಿ ಭಾರತದ ಇತಿಹಾಸದ ಮೇಲೆ ಬಹಳಷ್ಟು ಪ್ರಭಾವವನ್ನು ಬೀರಿತು.

೧೯೪೭ ರಿಂದ ೪೯ ರ ವರೆಗಿನ ಆ ತುಮುಲಮಯ ಅವಧಿಯಲ್ಲಿ ನೆಹರೂ ಓರ್ವ ಪ್ರಧಾನಿಯಾಗಿ ಅನೇಕ ನಿರ್ಣಾಯಕ ತೀರ್ಮಾನಗಳನ್ನು ಕೈಗೊಳ್ಳಬೇಕಾಯಿತು ಸರ್ಕಾರದ ನಾಯಕರಾಗಿ ನೆಹರು ಇನ್ನೂ ತಮ್ಮ. ಕಾಲುಗಳನ್ನು ಭದ್ರವಾಗಿ ಊರಲ್ಲಿಲ್ಲವೆಂಬುದು ನಿಜ, ಆದ್ದರಿಂದ ಅವರು ಪಟೇಲ್ ಹಾಗು ಮೌಂಟ್‌ಬಾಟನ್ನರ ಇಚ್ಛೆಗನುಗುಣವಾಗಿ ನಡೆದುಕೊಳ್ಳಲು ಇಚ್ಛಿಸಿದರು, ರಾಷ್ಟ್ರೀಯತೆಯ ವಿಚಾರದ ಬಗ್ಗೆ ಹೇಳುವುದಾದರೆ ನೆಹರೂರನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ, ಅವರು ತಮ್ಮದೇ ಆದ ಕಲ್ಪನೆಯ ಭಾರತವನ್ನು ಪುನರ್ ಕಲ್ಪಿಸಿಕೊಂಡಿದ್ದರು, ಆದರೆ ತಮ್ಮ ಕಲ್ಪನೆಯ ಭಾರತವನ್ನು ಪರರ ಸಹಾಯವಿಲ್ಲದೆ ಅವರು ಕಟ್ಟಲಾರದವರಾಗಿದ್ದರು.

ಪ್ರಾಣಿಗಳನ್ನು ಕೊಲ್ಲಬೇಡ ಆದರೆ ನಿನ್ನಲ್ಲಿರುವ ದುರಹಂಕಾರವೆಂಬ ಪ್ರಾಣಿಯನ್ನು ಕೊಲ್ಲು.

ಹಿಂದುಗಳು ಬಹುಸಂಖ್ಯಾತರಾಗಿದ್ದರು. ಆದರೆ, ಮುಸ್ಲಿಂ ಆಡಳಿತಗಾರರನ್ನು ಹೊಂದಿದ್ದ ಜುನಾಗಢ್ ಮತ್ತು ಹೈದರಾಬಾದ್ ಸಂಸ್ಥಾನಗಳು ಭಾರತದ ಭೂ ಪ್ರದೇಶದಿಂದ ಸುತ್ತುವರಿಯಲ್ಪಟ್ಟಿದ್ದರೂ ಹೈದರಬಾದ್ ಸ್ವತಂತ್ರವಾಗಿರಬೇಕೆಂದೂ, ಜುನಾಗಢ ಪಾಕಿಸ್ತಾನವನ್ನು ಸೇರಬೇಕೆಂದೂ ಆಲೋಚಿಸುತ್ತಿರುವಾಗ ಭಾರತೀಯ ಸೇನೆ ಆ ಸಂಸ್ಥಾನಗಳಲ್ಲಿ ನುಗ್ಗಿ ಒಂದೇ ಒಂದು ಗುಂಡು ಹಾರಿಸದೆ ಅವುಗಳನ್ನು ಸ್ವಾಧೀನಪಡಿಸಿಕೊಂಡಿತು. ಈ ಎರಡೂ ಕಾರ್ಯಾಚರಣೆಯ ತೀರ್ಮಾನ ಪಟೇಲರದೇ ಆಗಿತ್ತಾದರೂ ಅದಕ್ಕೆ ನೆಹರೂರ ಒಪ್ಪಿಗೆಯಿತ್ತು.

ಸರ್ಕಾರದ ಗುರುತರವಾದ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ದೇಶದ ಆಂತರಿಕ ಸಮಸ್ಯೆಗಳತ್ತಲೂ ಗಮನಕೊಡಬೇಕಾಗಿತ್ತು, ದೇಶದ ಆಡಳಿತದಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ತರುವಲ್ಲಿ ನೆಹರೂ ಉತ್ಸಕರಾಗಿಲ್ಲದೇ ಇರುವುದು, ಮತ್ತು ಬ್ರಿಟೀಶರ ಬಳುವಳಿಯಾಗಿ ಬಂದಿದ್ದ ಅಧಿಕಾರಶಾಹಿಯನ್ನೇ ಹಾಗು ಸೇನಾನಿಗಳನ್ನೇ ಅವಲಂಬಿಸುವುದಿರಲಿ, ಅವರನ್ನೇ ಮುಂದುವರಿಸಲು ಬಯಸಿದ ನೆಹರೂರ ಬಗ್ಗೆ ಆತ್ಯಂತಿಕ ಅಭಿಮಾನಿಗಳೂ ಆಶ್ಚರ್ಯಚಕಿತರಾದರು. ಇಂಗ್ಲೀಷರ ಆಡಳಿತ ಕಾಲದಲ್ಲಿ ಉಕ್ಕಿನ ಕವಚವೆಂದು ಕರೆಯಲ್ಪಟ್ಟಿದ್ದ ನೌಕರಶಾಹಿಯನ್ನೇ ಸ್ವತಂತ್ರ್ಯಭಾರತದಲ್ಲೂ ಮುಂದುವರೆಸಲು ನೆಹರು ಇಷ್ಟಪಟ್ಟರು. ಪಾಕಿಸ್ತಾನದಿಂದ ಬಂದ ಏಳು ದಶಲಕ್ಷಕ್ಕೂ ಹೆಚ್ಚಿನ ವಲಸೆಗಾರರು ನೆಲೆನಿಲ್ಲುವಂತೆ ಮಾಡುವ ಬೃಹದಾಕಾರದ ಸಮಸ್ಯೆಯನ್ನೇನೊ ಸರ್ಕಾರ ನಿಭಾಯಿಸಿತು ಆದರೆ ಇಂಗ್ಲೀಷರ ಆಡಳಿತದಲ್ಲಿದ್ದ ನೌಕರಶಾಹಿಯೆ ಮುಂದುವರಿಯಿತು ಸಾಮ್ರಾಜ್ಯಶಾಹಿ ಮನೋಬಾವದ ನೌಕರರಲ್ಲಿ ಹೊಸ ಭಾರತಕ್ಕೆ ತಕ್ಕುದಾದ ಅಭಿವೃದ್ಧಿಶೀಲ ಮನೊಭಾವವನ್ನು ಬೆಳೆಸುವುದರಲ್ಲಿಯಾಗಲಿ, ಜನತೆಯ ಸೇವೆ ಮಾಡಬೇಕೆಂಬ ಮನೋಭಾವನೆಯನ್ನು ಬೆಳೆಸುವುದರಲ್ಲೆಯಾಗಲಿ ನೆಹರು ವಿಫಲರಾದರು, ಹಳೆಯದು ಮುಂದುವರೆಯಬೇಕೆ ಹೊರತು ಬದಲಾವಣೆಯಲ್ಲ ಎಂಬುದೇ ನೆಹರೂರ ಆಗಿನ ಮಂತ್ರವಾಗಿತ್ತು.

ಇಂಗ್ಲೀಷರ ಆಳ್ವಿಕೆ ಕಾಲದಲ್ಲಿದ್ದ ನೌಕರರು ಸ್ವತಂತ್ರ ಭಾರತದಲ್ಲೂ ಶ್ರೀಮಂತರಾಗುತ್ತಿರುವುದನ್ನು ನೋಡಿ ಕಾರಾಗೃಹವಾಸ ಅನುಭವಿಸಿ ಬಹಳಷ್ಟು ನೊಂದಿದ್ದ ಸ್ವಾತಂತ್ರ್ಯ ಹೋರಾಟಗಾರರು ಬಹಳ ದುಃಖಿತರಾದರು.

ಗಾಂಧೀಜಿಯವರ ಹತ್ಯೆ ನೆಹರೂರ ಕೋಮುವಾದದ ವಿರೋಧನೀತಿಗೆ ಬಲತಂದುಕೊಟ್ಟಿತು. ಆರ್.ಎಸ್.ಎಸ್. ಸಂಘಟನೆಯನ್ನು ಪ್ರತಿಬಂಧಿತಗೊಳಿಸಲಾಯಿತು, ಆದರೆ ಈ ಪ್ರತಿಬಂಧವನ್ನು ಒಂದು ವರ್ಷದ ತರುವಾಯ ತೆಗೆದುಹಾಕಲಾಯಾತು, ಆರ್.ಎಸ್.ಎಸ್.ನ ಪ್ರತಿಬಂಧಕ್ಕೆ ಪಟೇಲರು ಸಹ ತಮ್ಮ ಒಪ್ಪಿಗೆಕೊಟ್ಟಿದ್ದರು. ಆದರೆ ಸಂಸ್ಥಾನಿಕರಿಗೆ ಜೀವನಾಂಶವನ್ನು ಕೊಡುವುದರಿಂದ ಹಿಡಿದು, ಭೂ ಸುಧಾರಣೆಯಂಥ ವಿಷಯದ ಬಗ್ಗೆ ಕೈಗೊಳ್ಳಲಾದ ನೆಹರೂರ ಎಲ್ಲ ತೀರ್ಮಾನಗಳು ಕಾಂಗ್ರೆಸ್ ಪಕ್ಷದಲ್ಲಿದ್ದ ಬಲಪಂಥೀಯರ ವಿಚಾರಗಳಿಂದ

ಪ್ರಭಾವಿತಗೊಂಡಿದ್ದವು. ಇಂಥ ವಿಷಯಗಳಲ್ಲಿ ನೆಹರೂ ನಿಃಸಹಾಯಕರಾಗಿರುತ್ತಿದ್ದರು. ಪಟೇಲರು ಮಾತ್ರ ತಮ್ಮ ಗೃಹಶಾಖೆಯನ್ನು ಬಿಗಿನಿಲುವಿನಿಂದ ನಡೆಸಿಕೊಂಡು ಹೋಗುತ್ತಿದ್ದರು.

೧೯೪೮ ರ ಜೂನ್ ೨೧ ಕ್ಕೆ ಅಂದರೆ ಭಾರತದ ಸ್ವಾತಂತ್ರ್ಯ ಮತ್ತು ದೇಶದ ವಿಭಜನೆಯ ೧೦ ತಿಂಗಳ ನಂತರ ಮೌಂಟ್‌ಬಾಟನ್ ಭಾರತಕ್ಕೆ ಅಂತಿಮವಾಗಿ ವಿದಾಯ ಹೇಳಿದರು, ಅವರ ನಂತರ ಭಾರತದ ಗೌವರ್ನರ್ ಜನರಲ್ ಆಗಿ ರಾಜಾಜಿ ಅಧಿಕಾರವಹಿಸಿಕೊಂಡರು. ಒಂದು ಕಾಲಕ್ಕೆ ರಾಜಾಜಿಯವರೇ ಗಾಂಧೀಜಿಯವರ ಉತ್ತರಾಧಿಕಾರಿಯೆಂದು ಭಾವಿಸಲಾಗಿತ್ತು, ಸಿ.ರಾಜಗೋಪಾಲಚಾರಿಯವರು (ರಾಜಾಜಿ) ಮನೋಧರ್ಮದಿಂದ ಸಂಪ್ರದಾಯನಿಷ್ಠರಾಗಿದ್ದರೂ ಸಹ ಅವರು ಕಾಂಗ್ರೇಸ್‌ನ ಬಲಪಂಥೀಯರ ಕೋಮುವಾದದ ಬಗ್ಗೆ ಸಹಾನುಭೂತಿಹೊಂದಿರಲಿಲ್ಲ, ಸರ್ಕಾರದ ಪ್ರಮುಖರಾಗಿದ್ದ ನೆಹರೂರವರಿಗೆ ರಾಜಾಜಿ ತಮ್ಮದೇ ಆದ ರೀತಿಯಲ್ಲಿ ಬೆಂಬಲವನ್ನು ಕೊಟ್ಟರು, ಆದರೆ ೧೯೫೦ ಜನವರಿ ೨೬ ರಂದು ಹೊಸಭಾರತ ಸಂವಿಧಾನ ಪ್ರಕಾರ ಗವರ್ನರ್ ಜನರಲ್ ಸ್ಥಾನವು ಗಣರಾಜ್ಯದ ಅಧ್ಯಕ್ಷನೆಂದು ಪರಿವರ್ತನೆಗೊಳ್ಳುತ್ತಿರುವ ದಿನ ಬಂದಾಗ ಪಟೇಲರು ತಮ್ಮ ಅನುಚರ ರಾಜೇಂದ್ರಪ್ರಸಾದರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಷ್ಟ್ರಪತಿಯೆಂದು ಆಯ್ಕೆಯಾಗುವಂತೆ ಯೋಜಿಸಿದ್ದರು, ಈ ವಿಷಯದಲ್ಲಿ ನೆಹರೂ ಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು, ಪ್ರಸಾದರ ಆಯ್ಕೆ ನೆಹರೂರಿಗೆ ಆಶ್ಚರ್ಯವನ್ನುಂಟುಮಾಡಿತು, ಆಗ ನೆಹರೂ ರಾಜೇಂದ್ರ ಪ್ರಸಾದರನ್ನು ಭೇಟಿ ಮಾಡಿ ತಮ್ಮ ನಾಮಪತ್ರವನ್ನು ಹಿಂತಿಗೆದುಕೊಳ್ಳುವಂತೆ ಹೇಳಿದರಲ್ಲದೆ, ಪ್ರಸಾದರೆ ಅಧ್ಯಕ್ಷ ಸ್ಥಾನಕ್ಕೆ ರಾಜಾಜಿಯವರ ಹೆಸರನ್ನು ಸೂಚಿಸಬೇಕೆಂದು ಹೇಳಿದರು. ಆಗ ರಾಜೇಂದ್ರಪ್ರಸಾದರು ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿದರು. ತಾವು ನೆಹರು ಮತ್ತು ಪಟೇಲ್ ಒಂದುಗೂಡಿ ಹೇಳಿದಂತೆ ನಡೆದುಕೊಳ್ಳುವುದಾಗಿ ಹೇಳಿದರು, ನೆಹರೂಗೆ ಈ ಮಾತಿನ ಒಳಾರ್ಥ ಗೊತ್ತಾಯಿತು, ಕೊನೆಗೆ ರಾಜೇಂದ್ರ ಪ್ರಸಾದರೇ ರಾಷ್ಟ್ರಪತಿಯಾಗಿ ಆಯ್ಕೆಗೊಂಡರು. ಹಾಗೆ ಆಯ್ಕೆಗೊಂಡಮೇಲೆ ಪ್ರಸಾದರು ಮಾಡಿದ ಮೊದಲ ಕೆಲಸವೆಂದರೆ ಜನವರಿ ೨೬ ನೇ ತಾರೀಖಿನ ಬದಲಾಗಿ ತಮ್ಮ ಜ್ಯೋತಿಷಿಗಳು ಸೂಚಿಸುವ ಪವಿತ್ರ ದಿನವನ್ನು ಗೊತ್ತುಮಾಡಬೇಕೆಂದು ಹೇಳಿದ್ದು. ನೆಹರೂ ಈ ಸಲಹೆಯನ್ನು ಸಾರಾಸಗಟಾಗಿ ತಳ್ಳಿ ಹಾಕಿದರಲ್ಲದೆ, ದೇಶದ ಆಡಳಿತದೊಂದಿಗೆ ತಮ್ಮ ಸಂಬಂಧವೇನಾದರೂ ಇರುವುದಾದರೆ ಈ ದೇಶವನ್ನು ಭವಿಷ್ಯಹೇಳುವವರು ಆಳಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿದರು. ಈ ಸಲ ನೆಹರೂ ಗೆದ್ದರು.

ನೆಹರೂ ಮತ್ತು ಪಟೇಲ್ ಒಂದೇ ಒಂದು ಸಲ ಬಹಿರಂಗವಾಗಿ ಸಂಘರ್ಷದ ಅವಸ್ಥೆ ಮುಟ್ಟಿದ್ದರು. ಅದು ೧೯೫೦ ರಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಹಿಂದುಗಳ ಬೀಕರ ಹತ್ಯೆ ಪ್ರಾರಂಭವಾದಾಗ ಅಲ್ಲಿಗೆ ಭಾರತೀಯ ಸೈನ್ಯವನ್ನು ಕಳುಹಿಸುವುದರ ಮೂಲಕ ಪ್ರವೇಶಿಸಬೇಕೆಂದು ಒತ್ತಾಯ ಬಂದಿತು. ಆಗ ಪಾಕಿಸ್ತಾನದ ಪ್ರಾಧಾನ ಮಂತ್ರಿಯಾಗಿದ್ದ

ಲಿಯಾಕತ್ ಆಲಿಖಾನ್‌ರೊಂದಿಗೆ ಮಾತನಾಡುವುದರ ಮೂಲಕ ಕೋಮು ಸೌಹಾರ್ದತೆಯನ್ನು ಸಾಧಿಸಲು ನೆಹರೂ ಬಯಸಿದರು, ಆದರೆ ನೆಹರೂರ ಈ ಪ್ರಯತ್ನವು ಉಳಿದ ಮುಖಂಡರಿಂದ ಉಪೇಕ್ಷೆಗೆ ಒಳಗಾದಾಗ ಅವರು ರಾಜೇಂದ್ರ ಪ್ರಸಾದರಿಗೆ ತಮ್ಮ ರಾಜೀನಾಮೆ ಕಳುಹಿಸಿದರು. (ಸ್ಟೇನ್ಲಿ ವೋಲ್‌ಪೋರ್ಟ್ ಎಂಬುವವರ ಪ್ರಕಾರ : ಈ ಎಲ್ಲ ವಿದ್ಯಮಾನಗಳಿಂದ ನೆಹರೂ ಬಹಳ ಆಯಾಸಗೊಂಡರಲ್ಲದೆ ಹೃದಯ ವೇದನೆಗೂ ಒಳಗಾಗಿದ್ದರು. ಅದೇ ಸಮಯಕ್ಕೆ ಸರಿಯಾಗಿ ನೆಹರೂರವರನ್ನು ಭೇಟಿ ಮಾಡಲು ಬಂದಿದ್ದ ಎಡ್ವಿನ್ ಮೌಂಟ್‌ಬಾಟನ್‌ರೊಂದಿಗೆ ಓಡಿಹೋಗುವ ವಿಚಾರವನ್ನು ಸಹ ನೆಹರು ಮಾಡಿದ್ದರು) ಈ ವಿಷಯದಲ್ಲಿ ಜವಹರ್‌ಲಾಲ್‌ರ ದೌರ್ಬಲ್ಯವನ್ನು ವಿಮರ್ಷಿಸಲು, ಪಟೇಲರು ತಮ್ಮ ಮನೆಯಲ್ಲಿ ಕಾಂಗ್ರೆಸಿಗರ ಸಭೆಯನ್ನು ಕರೆದಾಗ ನೆಹರೂ ತಮ್ಮ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡರಲ್ಲದೆ ತಮ್ಮ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುತ್ತಾ ಪಾಕಿಸ್ತಾನ ಸಂಬಂಧವಾದ ತಮ್ಮ ನೀತಿ ಕುರಿತು ಸಾರ್ವಜನಿಕ ಚರ್ಚೆಗಾಗಿ ಪಟೇಲರಿಗೆ ಕರೆಕೊಟ್ಟರು ಮತ್ತು ತಾವಿಬ್ಬರೂ ಒಟ್ಟಿಗೆ ಸೇರಿ ಕೆಲಸ ಮಾಡುವ ಸಾಧ್ಯತೆ ಕುರಿತ ಅನುಮಾನ ವ್ಯಕ್ತಪಡಿಸಿ ಪಟೇಲರಿಗೆ ಪತ್ರವನ್ನು ಸಹ ಬರೆದರು, ನೆಹರೂರ ಈ ಪ್ರತಿಭಟನೆ ಎಷ್ಟೊಂದು ಜೋರಾಗಿತ್ತೆಂದರೆ ಕೊನೆಯಲ್ಲಿ ಪಟೇಲರು ತಮ್ಮ ನಿಲುವಿನಿಂದ ಹೆಜ್ಜೆ ಹಿಂತೆಗೆದುಕೊಂಡರಷ್ಟೇ ಅಲ್ಲ ನೆಹರೂರಿಗೆ ತಮ್ಮ ನಿಷ್ಠೆಯನ್ನು ತೋರಿಸಿದರು. ಅಲ್ಲದೆ, ಜವಾಹರಲಾಲ್ ಪಾಕಿಸ್ತಾನದ ಲಿಯಾಕತ್ ಆಲಿಖಾನ್‌ರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನೂ ಸಮರ್ಥಿಸಿದರು.

ನೆಹರೂರ ಜೀವಿತಾವಧಿಯಲ್ಲಿ ಅವರನ್ನು ಕಾಂಗ್ರೆಸ್ ವಿರೋಧಿಸಿದ್ದು ಇದೇ ಕೊನೆಯ ಘಟನೆಯಾಯಿತು, ಆದರೆ ಆ ದಿನಗಳಲ್ಲಿ ನೆಹರೂ ಯಾವಾಗಲು ಯಶಸ್ವಿಯಾಗುವ ರಾಜಕಾರಣಿಯಾಗಿರಲಿಲ್ಲ, ರಾಜೇಂದ್ರ ಪ್ರಸಾದರು ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವ ಸಂದರ್ಭದಲ್ಲಿ ನೆಹರೂ ಅನುಭವಿಸಿದ್ದ ಹಿನ್ನಡೆಯ ಮುಯ್ಯನ್ನು ತೀರಿಸಿಕೊಳ್ಳುವ ಸಮಯ ಕೆಲವು ತಿಂಗಳುಗಳ ನಂತರ ನಡೆಯಬೇಕ್ಕಿದ್ದ ಕಾಂಗೆಸ್ ಪಕ್ಷದ ಅಧ್ಯಕ್ಷರ ಚುನಾವಣೆ ಸಮಯದಲ್ಲಿ ಬಂತು, ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನೆಹರೂ ಸ್ವತಃ ಸ್ಪರ್ಧಿಸಲು ಇಷ್ಟಪಟ್ಟಿದ್ದರಾದರೂ, ಪ್ರಾಧಾನಮಂತ್ರಿಯೂ ಆಗಿ, ಪಕ್ಷದ ಅಧ್ಯಕ್ಷನಾಗುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಬಂದು ತಮ್ಮ ಹೆಸರನ್ನು ಹಿಂದಕ್ಕೆ ಪಡೆದರಾದರೂ, ಆ ಸ್ಥಾನಕ್ಕೆ ತಮ್ಮ ಹಳೆಯ ಮಿತ್ರ ಆಚಾರ್ಯ ಕೃಪಲಾನಿಯವರನ್ನು ಬೆಂಬಲಿಸಿದರು, ಕೃಪಲಾನಿಯವರು ಬಲಪಂಥೀಯ ಉಮೇದುವಾರ ಪುರುಷೋತ್ತಮದಾಸ್ ಟಂಡನ್ ವಿರುದ್ಧ ಸ್ಪರ್ಧಿಸಿದರು, ೧೯೨೩ರಲ್ಲಿ ಅಲ್ಹಾಬಾದ್ ಪೌರಸಭೆಗೆ ನಡೆದ ಚುನಾವಣೆಯಲ್ಲಿ ಈ ಪುರುಷೋತ್ತಮದಾಸ್ ಟಂಡನ್ನರೇ ನೆಹರೂರ ವಿರುದ್ಧ ಸ್ಪರ್ಧಿಸಿದ್ದರು, ಮುಸ್ಲಿಂ ಮತಗಳನ್ನು ಪಡೆಯಲು ಸಾಧ್ಯವಾಗದೆ ಚುನಾವಣೆಯಲ್ಲಿ ಸೋತರು. ನೆಹರೂ ಗೆದ್ದು ಬಂದು ಅಲಹಾಬಾದ್ ಪುರ ಸಭೆಯ ಮಹಾ ಪೌರರಾಗಿ ಕೆಲಸ ಮಾಡುವುದರ ಮೂಲಕ ರಾಜಕೀಯ ಅನುಭವ ದೊರೆಯುವುದಕ್ಕೆ

ಕಾರಣರಾಗಿದ್ದರು. ಟಂಡನ್‌ರಿಗೆ ಪಟೇಲರ ಬೆಂಬಲವಿತ್ತು. ಜವಾಹರಲಾಲರ ಬಹಿರಂಗ ವಿರೋಧದ ನಂತರವೂ ಟಂಡನ್ ಶೇಕಡಾ ೫೦ರಷ್ಟು ಮತಗಳನ್ನು ಪಡೆದು ಗೆದ್ದರು, ಆದರೆ ನೆಹರೂ ಕಾಂಗ್ರೆಸ್ ಕಾರ್ಯಕಾರಣಿ ಸಮಿತಿಯ ಸದಸ್ಯನಾಗಲು ಒಪ್ಪಲಿಲ್ಲ, ಕೊನೆಯಲ್ಲಿ ನೆಹರೂರ ಮನವೊಲಿಸಿ ಅವರ ಇಚ್ಚೆಗೆ ವಿರುದ್ಧವಾಗಿ ಅವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲಾಯಿತು, ಟಂಡನ್ ಕಾಂಗ್ರೆಸ್ ಅಧ್ಯಕ್ಷರಾದ ನಂತರ ಒಂದು ವರ್ಷ ಕಾಲ ನೆಹರೂ ಟಂಡನ್ನರನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನದಲ್ಲೇ ತೊಡಗಿದರು. ಇದಕ್ಕೆ ಹದಿಮೂರು ವರ್ಷಗಳ ಮೊದಲು ನೆಹರೂರ ಗುರುವಾಗಿದ್ದ ಮಹಾತ್ಮಾಗಾಂಧಿ ಇದೇ ರೀತಿ ಸುಭಾಷ್‌ಚಂದ್ರಬೋಸ್‌ರನ್ನು ನಿಷ್ಕ್ರಿಯಗೊಳಿಸಿದ್ದರು.

೧೯೫೧ ಸೆಪ್ಟೆಂಬರ್‌ನಲ್ಲಿ ಜವಹರ್‌ಲಾಲ್ ಪಕ್ಷದಲ್ಲಿಯ ತಮ್ಮ ಎಲ್ಲ ಸ್ಥಾನಗಳಿಗೆ ರಾಜೀನಾಮೆ ಕೊಡುವುದರ ಮೂಲಕ ಟಂಡನ್ನರೊಂದಿಗೆ ಇದ್ದ ತಮ್ಮ ಭಿನ್ನಾಭಿಪ್ರಾಯವನ್ನು ಉಚ್ಛ್ರಾಯಸ್ಥಿತಿಗೆ ತಂದು ನಿಲ್ಲಿಸಿದರು. ತಾವು ಮತ್ತು ಟಂಡನ್ ಒಟ್ಟಿಗೆ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಹೇಳಿದರು, ಆದ್ದರಿಂದ ತಮ್ಮಿಬ್ಬರಲ್ಲಿ ಯಾರಾದರೊಬ್ಬರು ಸ್ಥಳ ಖಾಲಿಮಾಡಬೇಕೆಂದು ತಿಳಿಸಿದರು, ಟಂಡನ್ ಸ್ಥಳ ಖಾಲಿ ಮಾಡಿದರು, ಜವಹರಲಾಲ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು, ಪ್ರಧಾನ ಮಂತ್ರಿಯಾಗಿರುವವರು ಪಕ್ಷದ ಅಧ್ಯಕ್ಷರಾಗಿರಕೂಡದೆಂಬ ತಮ್ಮ ಹಳೆ ನಿಲುವನ್ನು ನೆಹರೂ ಸಂಪೂರ್ಣವಾಗಿ ಮರತೇ ಬಿಟ್ಟರು, ಈ ನಿರ್ಣಾಯಕ ವಿಜಯಕ್ಕೆ ಇನ್ನೊಂದು ಕಾರಣವಿತ್ತು, ಈ ಹೊತ್ತಿಗೆ ನೆಹರೂರ ಪ್ರಧಾನ ವಿರೋಧಿ ಪಟೇಲ್ ತೀರಿಕೊಂಡಿದ್ದರು, ಗಾಂಧಿಯವರ ಕೊಲೆಯ ನಂತರ ಪಟೇಲ್ ಹೃದಯಾಘಾತಕ್ಕೆ ಒಳಗಾಗಿದ್ದರು. ನಂತರ ಹೊಟ್ಟೆಯ ಕ್ಯಾನ್ಸರ್ ಬಂತು, ಭಾರತದ ನಾಜೂಕಾದ ಸ್ವಾತಂತ್ರ್ಯವನ್ನು ಬಲಪಡಿಸಿ ಡಿಸೆಂಬರ್ ೧೯೫೦ರಲ್ಲಿ ಪಟೇಲ್ ಮೃತರಾದರು, ಆಗ ಅವರಿಗೆ ೭೬ ವರ್ಷ ವಯಸ್ಸು, ಪಟೇಲ್ ಮತ್ತು ನೆಹರೂ ರಾಜಕೀಯ ಜೀವನದಲ್ಲಿ ಪರಸ್ಪರ ತಡೆಯಾಗಿದ್ದರು. ಪಟೇಲರ ಮರಣದಿಂದಾಗಿ ಜವಹರಲಾಲ್ ಸರ್ವತಂತ್ರ ಸ್ವತಂತ್ರರಾದರು, ಒಂದುವೇಳೆ ನೆಹರೂ ಸರ್ವಾಧಿಕಾರಿಯಾಗಲು ಬಯಸಿದ್ದರೆ ಅದು ಸಾಧ್ಯವಾಗಬಹುದಿತ್ತೇನೋ, ಆದರೆ ಹಾಗೆ ಆಗಲಿಲ್ಲ, ಏಕೆಂದರೆ ಜವಾಹರಲಾಲ್ ನಿಷ್ಠಾವಂತ ಪ್ರಜಾಪ್ರಭುತ್ವವಾದಿಯಾಗಿರಲು ಬಯಸಿದರು, ಗೃಹ ಮಂತ್ರಾಲಯವು ಎಲ್ಲ ಕಾನೂನು ಮತ್ತು ವ್ಯವಸ್ಥಾ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿದೆಯೆಂದು ನೆಹರೂ ಅರಿತರು, ಆದ್ದರಿಂದ ಗೃಹಮಂತ್ರಿಯಾದವರು ತನ್ನ ಸ್ಪರ್ಧಿಯಾಗಲು ಇದೆಲ್ಲವನ್ನು ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆಯಿರುವುದರಿಂದ, ಪಟೇಲರ ಮರಣದ ತರುವಾಯ ಗೃಹಮಂತ್ರಿ ಸ್ಥಾನಕ್ಕೆ ತಮ್ಮ ವಿಶ್ವಾಸಕ್ಕೆ ಪಾತ್ರರಾದವರನ್ನೇ ಆಯ್ಕೆ ಮಾಡುವುದರಲ್ಲಿ ನೆಹರೂ ಸದಾ ಎಚ್ಚರಿಕೆ ವಹಿಸಿದರು.

(೨೦೦೩, ನವೆಂಬರ್ ೩ರ ಹಿಂದೂ ಸಾಭಾರ)

ಅನು: ಸು.ಕೌ. ■

ನಮ್ಮ ಜ್ಞಾನ ವೃದ್ಧಿಯಾದಂತೆ ನಮ್ಮ ಅಜ್ಞಾನ ಬಿಚ್ಚಿಕೊಳ್ಳುತ್ತಾ ಹೋಗುವುದು.

ಮತಾಂತರ: ಮರು ಚಿಂತನೆ ಅಗತ್ಯ

- ಸುರೇಂದ್ರ ಕೌಲಗಿ

ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಬೌದ್ಧಧರ್ಮ ಸ್ವೀಕರಿಸಿದ ದಿನವಾದ ಅಕ್ಟೋಬರ್ ೧೪ ರಂದು ಬೆಂಗಳೂರಿನಲ್ಲಿ ಎರಡು ಲಕ್ಷಕ್ಕೂ ಹೆಚ್ಚು ದಲಿತರು ಹಿಂದೂಧರ್ಮವನ್ನು ತೊರೆದು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಬೌದ್ಧಧರ್ಮವನ್ನು ಸ್ವೀಕರಿಸಿದರೆಂಬುದಾಗಿ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆ. ಬೌದ್ಧಧರ್ಮವೊಂದನ್ನೇ ಅಲ್ಲ, ಇಸ್ಲಾಂ ಧರ್ಮವನ್ನೂ, ಕ್ರಿಶ್ಚಿಯನ್ ಧರ್ಮವನ್ನೂ, ದಲಿತರು ಸ್ವೀಕರಿಸಿದ ಸುದ್ದಿಗಳು ಸಹ ಆಗಾಗ ಪ್ರಕಟಗೊಳ್ಳುತ್ತಲೇ ಇರುತ್ತವೆ. ಹಿಂದೂ ಧರ್ಮವನ್ನು ತ್ಯಜಿಸಿ ಬೇರೆ ಧರ್ಮಕ್ಕೆ ಮತಾಂತರಗೊಳ್ಳುವುದು ಒಂದು ಚಳುವಳಿಯಾಗಿ ರೂಪಗೊಳ್ಳುತ್ತಿದೆ. ಇತ್ತೀಚೆಗೆ ಪ್ರಕಟವಾದ ಸಂಶೋಧನಾ ವರದಿಯೊಂದರ ಪ್ರಕಾರ ಹಿಂದುಸ್ತಾನದಲ್ಲಿ ಹಿಂದುಗಳ ಸಂಖ್ಯೆ ವರ್ಷವರ್ಷಕ್ಕೂ ಕಡಿಮೆಯಾಗುತ್ತಿದೆ. ೧೯೬೧ನೇ ಇಸ್ವಿಯಲ್ಲಿ ಹಿಂದುಗಳ ಸಂಖ್ಯೆ ಶೇಕಡಾ ೮೭.೨೩೭ ಇದ್ದುದು ೧೯೫೧ನೇ ಇಸ್ವಿಯಲ್ಲಿ ಶೇಕಡಾ ೮೫.೦೮ಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ ಮುಸ್ಲಿಂರ ಹಾಗು ಕ್ರೈಸ್ತರ ಸಂಖ್ಯೆಯ ಪ್ರಮಾಣ ಅಧಿಕಗೊಂಡಿದೆ. ಈ ರೀತಿಯ ಏರಿಳಿತಕ್ಕೆ ಕಾರಣ ಭಾರತದಲ್ಲಿರುವ ೨೫ ಕೋಟಿ ದಲಿತರಲ್ಲಿ ಕೆಲವರ ಮತಾಂತರ ಕಾರಣವಾಗಿರಬಹುದು. ಆದರೆ ಮತಾಂತರಗೊಂಡ ದಲಿತರ ನಿಖರ ಸಂಖ್ಯೆ ದೊರೆತಿಲ್ಲ.

ದಲಿತರ ಮತಾಂತರಕ್ಕೆ ಮುಖ್ಯ ಕಾರಣ ಎರಡು: ಹಿಂದೂ ಧರ್ಮದಲ್ಲಿ ಮಾನವಾಧಾರಿತ ಸಮಾನತೆಯಿಲ್ಲ; ದಲಿತರ ಮೇಲೆ ಸರ್ವರ್ಣೀಯರ ದೌರ್ಜನ್ಯ ನಡೆಯುತ್ತದೆ.

ಧರ್ಮ ಮತ್ತು ಮತಾಂತರ ಇತ್ಯಾದಿ ವಿಚಾರಗಳು ಗಹನವಾದಂಥವು, ಇವು ಸಾಮಾನ್ಯರ ತಿಳುವಳಿಕೆಗೆ ಎಟುಕುವಂತಹದಲ್ಲ, ಎಷ್ಟೋ ಸಲ ಮತಾಂತರಗೊಳ್ಳುವ ವ್ಯಕ್ತಿಗೆ ತಾನು ಏಕೆ ಮತಾಂತರಗೊಳ್ಳುತ್ತಿದ್ದೇನೆ ಎಂಬ ಬಗ್ಗೆ ಸ್ಪಷ್ಟವಾದ ಮತ್ತು ಅವನ ಆತ್ಮಸಾಕ್ಷಿ ಒಪ್ಪುವಂಥ ವಿಚಾರಗಳು ಗೊತ್ತಿಲ್ಲದೆ ಇರಬಹುದು.

ಇವತ್ತು ಭಾರತದಲ್ಲಿರುವ ಬಹುತೇಕ ಧರ್ಮಗಳು, ಇಸ್ಲಾಂ ಮತ್ತು ಕ್ರಿಸ್ತಾನ್ ಧರ್ಮಗಳನ್ನು ಬಿಟ್ಟು, ಅವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಹಿಂದೂ ಧರ್ಮದ ವಿಚಾರಗಳಿಂದ ಪ್ರಭಾವಿತಗೊಂಡತವೇ ಆಗಿವೆ, ಹಿಂದು ಧರ್ಮ ಕಳೆದ ೧೦ರಿಂದ ೧೨ ಸಾವಿರ ವರ್ಷಗಳಿಂದ ಇದೆ. ಆದ್ದರಿಂದ ಆ ನಂತರ ಹುಟ್ಟಿದ ಧರ್ಮಗಳ ಮೇಲೆ ಹಿಂದೂ ಧರ್ಮದ ಪ್ರಭಾವ ಬೀಳುವುದು ಸಹಜವಾದ ಸಾಮಾಜಿಕ ಕ್ರಿಯೆ.

ಹಿಂದೂ ಧರ್ಮ ಪ್ರಾಚೀನವಾಗಿರುವುದೇ ಅದರ ಶಕ್ತಿಯೂ ಆಗಿದೆ, ದೌರ್ಬಲ್ಯವೂ ಆಗಿದೆ. ಅದರ ಶಕ್ತಿಯ ಬಗ್ಗೆ ಹೇಳುವುದಾದರೆ ಹಿಂದೂಧರ್ಮ ಎಲ್ಲಾ ಪರಸ್ಪರ ವಿರೋಧಿ ವಿಚಾರಗಳ ಸಮನ್ವಯದ ಕೂಟ. ಪ್ರಪಂಚದ ಬೇರೆ-ಬೇರೆ ಕಡೆ ಹುಟ್ಟಿದ ಧರ್ಮಗಳು ಅಥವಾ ಭಾರತದಲ್ಲಿಯೇ ಹುಟ್ಟಿದ ಧರ್ಮಗಳು ಭಾರತಕ್ಕೆ ಆಶ್ರಯಪಡೆಯುವ ದೃಷ್ಟಿಯಿಂದ ಬಂದಿದ್ದಿರಬಹುದು, ಇಲ್ಲದೆ ಆಕ್ರಮಣ ದೃಷ್ಟಿಯಿಂದ ಬಂದಿದ್ದಿರಬಹುದು ಆ ಎಲ್ಲ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳನ್ನು ಅಂಗೀಕರಿಸಿ ಸಮನ್ವಯಗೊಳಿಸುವ ಪ್ರಯತ್ನವನ್ನು ಹಿಂದೂಧರ್ಮ ಮಾಡಿದೆ. ಆದ್ದರಿಂದಲೇ ಇದೇ ಹಿಂದೂ ಧರ್ಮದ ಮತ್ತು ಭಾರತದ ಶಕ್ತಿಯಾಗಿದೆ. ಹಿಂದೂ ಧರ್ಮದಲ್ಲಿ ಪರಸ್ಪರ ವಿರೋಧವಿಲ್ಲ.

ನಿನ್ನ ಎಲ್ಲಾ ಕರ್ತವ್ಯಗಳನ್ನು ಮಾಡು ಆದರೆ ನಿನ್ನ ಮನಸ್ಸನ್ನು ದೇವರ ಮೇಲೆ ಇಡು.

ನಿರ್ಗುಣ ಮತ್ತು ನಿರಾಕಾರದ ಉಪಾಸನೆಗೆ ಸ್ಥಾನವಿರುವಂತೆಯೇ ಸಗುಣ ಮತ್ತು ಸಾಕಾರದ ಉಪಾಸನೆಗೂ ಸ್ಥಾನವಿದೆ, ಹಾಗೆಯೇ ದ್ವೈತ ಸಿದ್ಧಾಂತಕ್ಕೆ ಅವಕಾಶವಿರುವಂತೆ ಅದ್ವೈತ ಮತ್ತು ವಿಶಿಷ್ಠಾದ್ವೈತಕ್ಕೂ ಅವಕಾಶವಿದೆ. ಅಂತೆಯೇ ಈಶ್ವರನನ್ನು ಒಪ್ಪದೇ ಇರುವ ನಾಸ್ತಿಕರಿಗೂ, ಒಪ್ಪುವ ಆಸ್ತಿಕರಿಗೂ ಸ್ಥಾನವಿದೆ. ಹೀಗೆ ಹಿಂದೂ ಧರ್ಮದಲ್ಲಿರುವವರೆಲ್ಲರಿಗೆ ತಮ್ಮ ತಮ್ಮ ಇಚ್ಛಾನುಸಾರವಾಗಿ ನಡೆಯುವ ಸ್ವಾತಂತ್ರ್ಯವಿದೆ. ಬಹುಶಃ ಇಂಥ ಸ್ವಾತಂತ್ರ್ಯ ಪ್ರಪಂಚದ ಇತರ ಯಾವುದೇ ಧರ್ಮದಲ್ಲಿಲ್ಲ. ಆದಾಗ್ಯೂ ಡಾ|| ಅಂಬೇಡ್ಕರ್ ಹೇಳಿರುವಂತೆ ಹಿಂದೂ ಧರ್ಮ ಹಲವಾರು ಕುಪದ್ಧತಿಗಳಿಗೆ, ಕುಸಂಪ್ರದಾಯಗಳಿಗೆ ಮನೆಮಾಡಿಕೊಟ್ಟಿತು, ಇದಕ್ಕೆ ಇದರ ಪ್ರಾಚೀನತೆಯೇ ಕಾರಣ. ಹಿಂದೂಧರ್ಮದಲ್ಲಿ ಇಂಥ ಅಸಂಗತ ವಿಷಯಗಳು ನುಸುಳಿದಾಗಲೆಲ್ಲ ಒಬ್ಬನಲ್ಲ ಒಬ್ಬ ಧಾರ್ಮಿಕ ಕಾರಣಪುರುಷ ಹುಟ್ಟಿ ಹಿಂದೂ ಧರ್ಮಗಳನ್ನು ಅದರ ಅಸಂಗತ ರೂಢಿಗಳಿಂದ ಬಿಡಿಸಲು ಪ್ರಯತ್ನಿಸಿದ್ದಾನೆ. ಅವರಲ್ಲಿ ಭಕ್ತಭಂಡಾರಿ ಬಸವಣ್ಣ, ಮಹಾವೀರ, ಗೌತಮಬುದ್ಧ, ಗುರುನಾನಕ್, ಸ್ವಾಮಿದಯಾನಂದ, ಮಹರ್ಷಿ ಕರ್ವೆ, ಸ್ವಾಮಿವಿವೇಕಾನಂದರಂಥವರು ಪ್ರಮುಖರಾಗಿದ್ದಾರೆ ಎಲ್ಲಿಯವರೆಗೆ ಹಿಂದೂ ಧರ್ಮ ತನ್ನ ಒಡಲೊಳಗೆ ವೇದ ಉಪನಿಷತ್ತು, ಅರಣ್ಯಕಗಳು, ಪುರಾಣಗಳು ಇತ್ಯಾದಿ ಉತ್ತಮೋತ್ತಮ ಮಾನವ ಕಲ್ಯಾಣ ವಿಚಾರಗಳನ್ನು ಇಟ್ಟುಕೊಂಡಿರುತ್ತದೋ ಅಲ್ಲಿಯವರೆಗೆ ಹಿಂದೂಧರ್ಮದ ಸುಧಾರಕರೂ ಹುಟ್ಟುತ್ತಲೇ ಇರುತ್ತಾರೆ. ಇಂಥವರ ಸರಣಿಯಲ್ಲಿ ಇತ್ತೀಚಿಗಿನ ಕ್ರಾಂತಿಕಾರರಲ್ಲಿ ಡಾ|| ಅಂಬೇಡ್ಕರ್ ಮತ್ತು ಮಹಾತ್ಮಾ ಗಾಂಧಿ. ಡಾ|| ಅಂಬೇಡ್ಕರ್ ಹಿಂದೂಧರ್ಮದಲ್ಲಿಯ ಕುಪದ್ಧತಿಗಳನ್ನು ಹಿಂದೂಧರ್ಮೀಯರಿಗೆ ಮನದಟ್ಟು ಮಾಡಿಕೊಟ್ಟರು. ಸಿಡಿದೆದ್ದರು, ಓರ್ವ ಅಭಿಮಾನಿ ಹಿಂದೂ ಆಗಿ ಆ ಧರ್ಮದ ಎಲ್ಲಾ ದೋಷಗಳನ್ನು ಬಹಿರಂಗವಾಗಿ ಜಾಲಾಡಿ, ಮುಖ್ಯವಾಗಿ ಅದರಲ್ಲಿದ್ದ ಅಸ್ಪೃಷ್ಯತಾ ನೀತಿಗಾಗಿ ಪಶ್ಚಾತ್ತಾಪ ಮಾಡಿಕೊಂಡರು. ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದ ಪ್ರಮುಖ ಪ್ರಚಾರಕ ಹಾಗು ಉದ್ಧಾರಕರಾಗಿ ಕೆಲಸ ಮಾಡಿದರು.

ಇಷ್ಟೆಲ್ಲ ಸಕಾರಾತ್ಮಕ ಬೆಳವಣಿಗೆಗಳು ಹಿಂದೂಧರ್ಮದ ಬಗ್ಗೆ ಆಗಿದ್ದರೂ ಸಹ ಇಪ್ಪತ್ತೊಂದನೇ ಶತಮಾನದಲ್ಲಿ, ಅನೇಕ ವೈಜ್ಞಾನಿಕ - ತಾಂತ್ರಿಕ ಪ್ರಗತಿಯಮಧ್ಯೆಯೂ ಹಿಂದೂಧರ್ಮದಲ್ಲಿ ಇನ್ನೂ ಹಲವಾರು ಬಗೆಯ ದೋಷಗಳು ಉಳಿದಿದೆ. ಇವುಗಳ ನಿವಾರಣೆಗಾಗಿ ಹಿಂದೂ ಧರ್ಮದ ಎಲ್ಲ ಮಠಾಧೀಶರು, ಸವರ್ಣಿಯರು ಸಂಘಟಿತರಾಗಿ ಹೋರಾಟ ಮಾಡಬೇಕು, ಹಿಂದೂ ಧರ್ಮವನ್ನು ಮಾನವೀಯ ಧರ್ಮವನ್ನಾಗಿ ಪರಿವರ್ತಿಸಿ ಹಿಂದೂ ಧರ್ಮದಿಂದ ಯಾರೂ ಮತಾಂತರ ಗೊಳ್ಳದಂತೆ ಪ್ರಯತ್ನಿಸಬೇಕು.

ಯಾವುದೇ ಧರ್ಮವಿರಲಿ ಅದು ಇಂದಿನ ಸಂವಿಧಾನಾತ್ಮಕ ಪ್ರಜಾತಂತ್ರ ಎಂಬ ವಿಶಾಲ ಸಾಗರದಲ್ಲಿ ವಿಲೀನಗೊಳ್ಳಬೇಕು. ಇನ್ನು ಬೇರೆ ಯಾವ ಧರ್ಮಕ್ಕೂ ಪ್ರತ್ಯೇಕತೆಯ ಅಧಾರದ ಮೇಲೆ ಅಸ್ತಿತ್ವದಲ್ಲಿರುವುದು ಇಂದಿನ ಕಾಲಧರ್ಮಕ್ಕೆ ವಿರುದ್ಧವಾಗುತ್ತದೆ. ಪ್ರತಿಯೊಂದು ಧರ್ಮವೂ ಈ ಪ್ರಜಾತಾಂತ್ರಿಕ ಸಂವಿಧಾನಬದ್ಧ ವ್ಯವಸ್ಥೆಯಲ್ಲಿದ್ದುಕೊಂಡೇ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಬೇಕಾಗುತ್ತದೆ. ಅಂದರೆ ಧರ್ಮ ವ್ಯಕ್ತಿಗತ ನೆಲೆಯಲ್ಲಿ ಇರಬೇಕಾಗುತ್ತದೆಯೇ ವಿನಃ ಸಾಮಾಜಿಕ ನೆಲೆಯಲ್ಲಿ ಅಲ್ಲ, ಬದಲಾದ ಈ ಪರಿಸ್ಥಿತಿಯಲ್ಲಿ ಮತಾಂತರ ಎಂಬುದು ತನ್ನ ಅರ್ಥ ಮತ್ತು ವ್ಯಾಪ್ತಿಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ಮತಾಂತರಕ್ಕೆ ಒಳಗಾಗುವವರು ಮತ್ತು ಮತಾಂತರ ಮಾಡಿಸುವವರು ತಾವು ಇಡುತ್ತಿರುವ ಹೆಜ್ಜೆಯ ಬಗ್ಗೆ ಗಂಭೀರವಾಗಿ ಮರು ಆಲೋಚನೆ ಮಾಡುವುದು ಒಳ್ಳೆಯದು. ■

ಸ್ವಸಹಾಯವೇ ಶ್ರೇಷ್ಠ ಸಹಾಯ.

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ ಹೊಸ ಶತಮಾನದ, ಹೊಸ ಸಹಸ್ರ ಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ.ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

- ಪ್ರಕಾಶಕರು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

KA-SKMND-470-2003-05
Regd. No. KAR/KAN/2000/3820
Val 04 Issue No : 4

ತೆರೆದ-ಅಂಚೆ

To,

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, (Regd.) Melkote. Dist- Mandya - 571 431
Phone : 08236-298754 E-mail: janapada@yahoo.com

COM Prints, Mysore ☎ 2460936 Cell : 9448323177